ತಿದ್ದುಪಡಿಗಾಗಿ :

# ಶ್ರೀ ಉಳುವಾನ ಗಂಗಾಧರ ಭಟ್ಟರು

ಅಧ್ಯಕ್ಷರು, ಶ್ರೀ ಸತ್ಯಸಾಯಿ ಲೋಕಸೇವಾ ಟ್ರಸ್ಟ್, ಅಳಿಕೆ

ಹುಟ್ಟಿದ ಸ್ಥಳ : ಕಾಸರಗೋಡಿನ ಬಾಯಾರು ಗ್ರಾಮದ ಉಳುವಾನ ಎಂಬಲ್ಲಿ ಜನನ
ತಂದೆ : ಸುಬ್ಬಣ್ಣ ಭಟ್ ತಾಯಿ : ಶಂಕರಿ ಅಮ್ಮ
ಜನನ : 29-07-1930 ನಿಧನ : 27-08-2020

ಒಂದು ಪ್ರತಿಷ್ಠಿತ ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿ 70 ವರ್ಷಗಳ ಕಾಲ ಸೇವೆ ಸಲ್ಲಿಸಿ, ಕಾರ್ಯದರ್ಶಿಯಾಗಿ, ಕೃಷಿ ವಿಭಾಗದ ಮುಖ್ಯಸ್ಥರಾಗಿ ಹೀಗೆ ಹಲವು ಕ್ಷೇತ್ರಗಳಲ್ಲಿ ಸುದೀರ್ಘವೆನಿಸುವಷ್ಟು, ಅಂದರೆ 70 ವರ್ಷಗಳಿಂದ ಸೇವೆ ಮಾಡುತ್ತಿರುವ ವ್ಯಕ್ತಿಯೋರ್ವನಲ್ಲಿ ಸ್ವಂತಕ್ಕೆ ನಯಾ ಪೈಸೆಯೂ ಕೈಯಲ್ಲಿಲ್ಲ. ಸ್ವಂತಕ್ಕಾಗಿ ಒಂದು ಬ್ಯಾಂಕ್ ಖಾತೆ ಇಲ್ಲ. ಸ್ವಂತಕ್ಕೆ ಒಂದು ಅಂಗೈಯಗಲ ಜಾಗವಿಲ್ಲ ಎಂದರೆ ನಂಬುವುದು ಕಷ್ಟವಾಗುತ್ತದೆ. ಆದರೆ ಇದು ಸತ್ಯ. ಅವರೇ ಶ್ರೀ ಸತ್ಯಸಾಯಿ ಲೋಕಸೇವಾ ಟ್ರಸ್ಟ್ ಅಳಿಕೆ ಮತ್ತು ಮುದ್ದೇನಹಳ್ಳಿ ಇದರ ಅಧ್ಯಕ್ಷರಾದ ಶ್ರೀ ಉಳುವಾನ ಗಂಗಾಧರ ಭಟ್ಟರು. 1978ರಲ್ಲಿ 10 ಲಕ್ಷ ರೂಪಾಯಿ ಸಾಲವಿದ್ದ ಸಂಸ್ಥೆಯೊಂದನ್ನು 2020ರ ಹೊತ್ತಿಗೆ ನೂರಾರು ಕೋಟಿ ಬೆಲೆ ಬಾಳುವ ದೇಶದ ಪ್ರತಿಷ್ಠೆಯ ವಿದ್ಯಾಸಂಸ್ಥೆಯಾಗಿ ಬೆಳೆಸಿದ ಕಥೆ ರೋಚಕವಾಗಿದೆ.

ಉಳುವಾನವೆಂಬುದು ಈಗಿನ ಕಾಸರಗೋಡು ಜಿಲ್ಲೆಯ ಮಂಜೇಶ್ವರ ತಾಲೂಕಿನ ಬಾಯಾರು ಗ್ರಾಮದಲ್ಲಿದೆ. ಉಳುವಾನದ ಒಂದು ಕುಲೀನ ಬ್ರಾಹ್ಮಣ ಮನೆತನದಲ್ಲಿ ದಿನಾಂಕ 29-07-1930ರಂದು ಶ್ರೀ ಗಂಗಾಧರ ಭಟ್ಟರ ಜನನ ಆಯಿತು. ಉಳುವಾನದ ಈ ಮನೆತನ ವಿದ್ಯೆ, ಪೌರೋಹಿತ್ಯ ಮತ್ತು ಮಂತ್ರ-ತಂತ್ರಕ್ಕೆ ಪ್ರಸಿದ್ಧವಾಗಿತ್ತು. ಇವರ ತೀರ್ಥರೂಪರು ಉಳುವಾನ ಸುಬ್ಬಣ್ಣ ಭಟ್ಟರು, ತಾಯಿ ಶಂಕರಿ ಅಮ್ಮ. ಸುಬ್ಬಣ್ಣ ಭಟ್ಟರು ಆ ಪರಿಸರದಲ್ಲಿ ಪ್ರಸಿದ್ಧ ಮಂತ್ರವಾದಿಗಳೆನಿಸಿದ್ದರು. ಆಯುರ್ವೇದ ಪಂಡಿತರೂ ಆಗಿದ್ದ ಅವರು ಕಷಾಯಗಳು, ಅರಿಷ್ಟಗಳು, ಲೇಹ್ಯಗಳನ್ನು ಸಿದ್ಧಪಡಿಸಿ ಹಳ್ಳಿಯವರಿಗೆ ನೀಡುತ್ತಿದ್ದರು. ಈಗಲೂ ಉಳುವಾನವೆಂದರೆ ಮಂತ್ರವಾದಿ ಮನೆತನವೆಂದೇ ಗುರುತಿಸುವುದು. ಅಲ್ಲಿ ಗ್ರಂಥಪೂಜೆ, ದುರ್ಗಾ ಪೂಜೆ, ನವರಾತ್ರಿ ಪೂಜೆಗಳು ದೇವಿಯ ಆರಾಧನೆಗಳು ನಡೆಯುತ್ತಿದ್ದವು. ಒಂದು ದುರ್ಗೆಯ ಗುಡಿಯನ್ನೂ ನಿರ್ಮಿಸಲಾಗಿದೆ.

ಸುಬ್ಬಣ್ಣ ಭಟ್ ಮತ್ತು ಶಂಕರಿ ಅಮ್ಮ ದಂಪತಿಗಳ ಮೂವರು ಮಕ್ಕಳಲ್ಲಿ ಯು. ಗಂಗಾಧರ ಭಟ್ಟರು ಹಿರಿಯರು. ಅನಂತರ ಇಬ್ಬರು ತಂಗಿಯರು, ಶ್ರೀಮತಿ ಗಂಗಮ್ಮ ಮತ್ತು ಶ್ರೀಮತಿ ಸರಸ್ವತಿ ಅಮ್ಮ. ಗಂಗಾಧರ ಭಟ್ಟರ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಬಾಯಾರಿನ ಸಮೀಪದಲ್ಲಿ ನಡೆಯಿತು. ಅವರು ಅಧ್ಯಾಪನ ವೃತ್ತಿಯನ್ನು ನಡೆಸಲು ಬೇಕಾದ ಹಿಂದಿ, ಸಂಸ್ಕೃತ, ಇಂಗ್ಲಿಷ್‌ಗಳನ್ನು ಕಲಿತು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳಿಗೆ ಕುಳಿತರು.

ಒಂದು ದಿನ ಗಂಗಾಧರ ಭಟ್ಟರು ಅಧ್ಯಾಪಕರಾಗುವ ಉದ್ದೇಶದಿಂದ ಪ್ರಚಾರಕ ಪ್ರಭಾರ ಟ್ರೈನಿಂಗ್‌ಗಾಗಿ ಅಣ್ಣ ರಾಮಕೃಷ್ಣರಲ್ಲಿ ಹಣ ಕೇಳಿದರು. ನಿನ್ನ ಪಾಲು ನೀನು ತಗೋ ಎಂದ ರಾಮಕೃಷ್ಣರು, ನಿನ್ನ ಹಣ ಎಲ್ಲ ಖರ್ಚಾಗಿದೆ ಎಂದು ಹೇಳಿ ಮಳೆಗಾಲ ಹತ್ತಿರವಾಗುವಾಗ ಒಂದು ಮುರುಕಲು ಮನೆಗೆ ಕಳುಹಿಸಿದರು. ಹಂಗಿನ ಅರಮನೆಗಿಂತ ವಿಂಗಡದ ಗುಡಿ ಲೇಸು ಎಂದು ಭಾವಿಸಿದ ಗಂಗಾಧರ ಭಟ್ಟರು ತನ್ನ ತಾಯಿಯೊಂದಿಗೆ ಆ ಮನೆಯಲ್ಲಿಯೇ ಕಳೆದರು. ಹೆಣ್ಣು ಮಕ್ಕಳು ಚಿಕ್ಕವರಿರುವಾಗಲೇ ಸಂಸಾರದ ಜವಾಬ್ದಾರಿಯನ್ನು ತಾಯಿ ಶಂಕರಿ ಅಮ್ಮ ಹೊತ್ತು ಕೊಳ್ಳಬೇಕಾಯಿತು. ಈ ಎಲ್ಲಾ ಘಟನೆಗಳು ಬಾಲಕ ಗಂಗಾಧರ ಭಟ್ಟರನ್ನು ಒಳಗೊಳಗೇ ಕೊರೆಯತೊಡಗಿತು. ಕಲಿಯಲೇಬೇಕೆಂಬ ತುಡಿತ ಹೆಚ್ಚಾಗಿ ಅವರಿವರಿಂದ ಎರವಲಾಗಿ ಹಣ ತೆಗೆದುಕೊಂಡು ಹಿಂದಿ ಅಧ್ಯಯನ ಪೂರೈಸಿದರು.

ಗಂಗಾಧರ ಭಟ್ ಮತ್ತು ಸ್ನೇಹಿತರಾದ ಈಶ್ವರ ಭಟ್ಟರು ನಾರಾಯಣ ಭಟ್ಟರ ತತ್ತ್ವ ಮತ್ತು ಆದರ್ಶಗಳಿಗೆ ಮಾರು ಹೋದವರು. ಕ್ರಮೇಣ ಇಬ್ಬರೂ ಮಡಿಯಾಲ ನಾರಾಯಣ ಭಟ್ಟರ ಮಡಿಯಾಲದ ಮನೆಯಲ್ಲೇ ನೆಲೆ ನಿಂತರು. ಆಗ ಗಂಗಾಧರ ಭಟ್ಟರ ಪ್ರಾಯ ಕೇವಲ 20 ವರ್ಷ (1950). ಸಂಸ್ಥೆಯ ಕಲ್ಪನೆಯ ಬೀಜ ರೂಪದಲ್ಲಿ ಮಡಿಯಾಲ ನಾರಾಯಣ ಭಟ್ಟರ ಮನಸ್ಸಿನಲ್ಲಿದ್ದ ಕಾಲ. ಅವರ ಆದರ್ಶಗಳಿಗೆ ಸ್ಪಂದಿಸುವ ವ್ಯಕ್ತಿಗಳಿದ್ದಾರೆ ಎಂದು ತೋರಿಸಿಕೊಟ್ಟವರು ಶ್ರೀ ಗಂಗಾಧರ ಭಟ್ಟರು ಮತ್ತು ಶ್ರೀ ಮಾದಕಟ್ಟೆ ಈಶ್ವರ ಭಟ್ಟರು. ಅಣ್ಣನವರ ಕಲ್ಪನೆ ಚಿಗುರೊಡೆಯುವಂತೆ ಮಾಡಿದವರು ಈ ಇಬ್ಬರು ಮಹಾನುಭಾವರು. ವಿಪತ್ತಿನ ಸರಮಾಲೆಗಳೇ ಎದುರಾದಾಗಲೂ ಜೊತೆಗಿದ್ದವರು. ಕೊನೆಯಲ್ಲಿ ಅಣ್ಣನವರ ಅಪರ ಕರ್ಮವನ್ನೂ ತಾನೇ ಪೂರೈಸಿ ನಿಜವಾದ ಅರ್ಥದಲ್ಲಿ ಮನೆ ಮಗನಾದವರು ಶ್ರೀ ಯು. ಗಂಗಾಧರ ಭಟ್ಟರು. ಅಜ್ಞಾನ, ದಾರಿದ್ರ್ಯ ಮತ್ತು ಅನಾರೋಗ್ಯ ಇವುಗಳ ನಿರ್ಮೂಲನಕ್ಕಾಗಿ ತ್ಯಾಗಜೀವಿಗಳ ಒಂದು ಬಳಗವನ್ನು ರಚಿಸಿ ಮೊದಲ ತ್ಯಾಗಜೀವಿ ಎನಿಸಿಕೊಂಡರು.

ಲೋಕಸೇವಾ ವೃಂದವು 7-12-1960ರಂದು ಸ್ಥಾಪನೆಯಾಯಿತಾದರೂ ಸವಾಲುಗಳು ಮಾತ್ರ ಬೆಟ್ಟದಷ್ಟಿತ್ತು. ಜನರಿಗೆ ಯಾವುದು ಅಗತ್ಯವೋ, ಯಾವುದರಿಂದ ಎಲ್ಲರಿಗೂ ಹಿತವಾಗುವುದೋ ಅಂತಹುದನ್ನು ಒದಗಿಸುವುದೇ ನಿಜವಾದ ಸಮಾಜ ಸೇವೆ. ಅದಕ್ಕಾಗಿ ಶ್ರಮಸೇವೆಯ ಮೂಲಕ ಸೇವಾ ಕಾರ್ಯವನ್ನು ಆರಂಭಿಸಿದರು. ಇಲ್ಲಿರುವ ಪ್ರತಿಯೊಂದು ಕಟ್ಟಡದಲ್ಲೂ ಶ್ರಮದಾನದ ಗಂಧವಿದೆ, ವಿದ್ಯಾರ್ಥಿಗಳ ಬೆವರಿದೆ.

1962ರಲ್ಲಿ ಅಳಿಕೆಯ ಎಲಿಮೆಂಟರಿ ಶಾಲಾ ಆಡಳಿತವನ್ನು ಲೋಕಸೇವಾ ವೃಂದವು ತನ್ನ ಕೈಗೆ ತೆಗೆದುಕೊಂಡಿತು. ಮುಂದಿನ ವರ್ಷ ಪ್ರೌಢಶಾಲಾ ತರಗತಿಗಳನ್ನು ಆರಂಭಿಸಲಾಯಿತು. ಅದೇ ಪ್ರೈಮರಿ ಶಾಲೆಯಲ್ಲಿ ಅತ್ತರ್ ತಟ್ಟಿಯನ್ನು ಬಳಸಿ ತರಗತಿ ಕೋಣೆಗಳ ನಿರ್ಮಾಣವಾಯಿತು. ಶ್ರೀ ಗಂಗಾಧರ ಭಟ್ಟರು ಆಗಲೇ ಅಣ್ಣನವರ ಪ್ರೇರಣೆಯಿಂದ ರಾಷ್ಟ್ರ ಭಾಷಾ ಪ್ರವೀಣ ಪರೀಕ್ಷೆಗೆ ಬರೆದು, ಪ್ರೌಢಶಾಲಾ ಅಧ್ಯಾಪಕರಾಗುವ ಅರ್ಹತೆಯನ್ನು ಸಂಪಾದಿಸಿದ್ದರು.

ಸಾಲ ತಂದು ಶಾಲೆ ಮಾಡುವುದಕ್ಕೆ ಅನೇಕರ ವಿರೋಧವಿದ್ದರೂ ಅಣ್ಣನವರ ಬೆನ್ನಿಗೆ ನಿಂತವರು ಶ್ರೀ ಯು. ಗಂಗಾಧರ ಭಟ್ಟರು. ಹೀಗಾಗಿ ಸಾಲ ತರುವ ಮತ್ತು ಬಡ್ಡಿ ಸಮೇತ ಹಿಂತಿಗುರಿಸುವ ಹೊಣೆಗಾರಿಕೆಯೂ ಅವರದ್ದೇ ಆಯಿತು.

ಖ್ಯಾತ ಸಾಹಿತಿ ಪ್ರೊ. ನಾ. ಕಸ್ತೂರಿಯವರು ಬಾಬಾರವರ ಸೆಕ್ರೆಟರಿ ಆಗಿದ್ದರೂ ಅವರ ಮಾತು ಕೇಳುವುದಕ್ಕಿಂತಲೂ ಬಾಬಾರವರಿಗೆ ವಿದ್ಯೆ ಕಲಿಸಿದ ಗುರುಗಳಾದ ತಮ್ಮಿರಾಜು ಅಥವಾ ಸುಬ್ಬಣ್ಣಾಚಾರ್ ಅವರನ್ನು ಕಂಡು ಬಾಬಾರವರ ಕುರಿತಾದ ಸತ್ಯವನ್ನು ತಿಳಿಯಬೇಕೆಂದು ಬಯಸಿದರು. ತಮ್ಮಿರಾಜುರವರು ಬಾಬಾರವರ ಬಾಲಲೀಲೆಗಳ ಕುರಿತು ಹೇಳುವಾಗ ಆ ದಂಪತಿಗಳ ಕಣ್ಣುಗಳಿಂದ ಧಾರಾಕಾರವಾಗಿ ಆನಂದಾಶ್ರುಗಳು ಹರಿಯುತ್ತಿತ್ತು. ನನ್ನ ಸಂದೇಹದ ಬಂಡೆ ಆ ಪವಿತ್ರ ತೀರ್ಥದಲ್ಲಿ ಕೊಚ್ಚಿಹೋಯಿತು ಎನ್ನುತ್ತಾರೆ ಯು. ಗಂಗಾಧರ ಭಟ್ಟರು. ಅಂದಿನಿಂದ ಬಾಬಾರವರ ಪರಮ ಭಕ್ತರಾದರು.

1962ರಲ್ಲಿ ಚೀನಾ ಆಕ್ರಮಣದ ವಾರ್ತೆ ಜನರನ್ನು ಬೆಚ್ಚಿ ಬೀಳಿಸಿತ್ತು. ಆಗ ಸೈನಿಕ ನಿಧಿಗೆ ಗಂಗಾಧರ ಭಟ್ಟರಲ್ಲಿ ಸಹಾಯ ಮಾಡಲು ಏನೂ ಇರಲಿಲ್ಲ. ಸಂಬಳವಿಲ್ಲದ ಅಧ್ಯಾಪಕ, ಸಂಬಳ ರಹಿತ ಕಾರ್ಯದರ್ಶಿ, ತನ್ನ ಕಿವಿಯಲ್ಲಿದ್ದ ಒಂಟಿಯನ್ನು (ಕಿವಿಯ ಆಭರಣ) ಹಿಂದೂ ಮುಂದೂ ನೋಡದೆ ದಾನ ಮಾಡಿ ಬಿಟ್ಟರು.

ನಾರಾಯಣ ಭಟ್ಟರ ಅಭಿಮಾನಿ ಬಳಗದ ಒತ್ತಡಕ್ಕೆ ಮಣಿದು 1973ರಲ್ಲಿ ಲೋಕಸೇವಾ ವೃಂದದ ಶಾಖೆಯೊಂದು ಕೋಲಾರ ಜಿಲ್ಲೆಯ (ಪ್ರಸ್ತುತ ಚಿಕ್ಕಬಳ್ಳಾಪುರ) ಮುದ್ದೇನಹಳ್ಳಿಯಲ್ಲಿ ಪ್ರಾರಂಭವಾಯಿತು. ಅತಿಥಿಗಳಾಗಿ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಪಾಲ್ಗೊಂಡಿದ್ದರು.

ತಾಯಿಯ ಆಶ್ರಯಕೆ ಮತ್ತು ತ್ಯಾಗ ಜೀವನ ಇವುಗಳಲ್ಲಿ ಯಾವುದು ಸರಿ ಯಾವುದು ತಪ್ಪು ಎಂಬ ಜಿಜ್ಞಾಸೆಯಲ್ಲಿ ಬಿದ್ದಾಗ, ಬಾಬಾರವರು ಶುಂಠಿಕೊಪ್ಪದ ಸಮೀಪದ ಬಾಳೆಕ್ಕಾಡ್ ಎಸ್ಟೇಟ್‌ಗೆ ಬಂದಿದ್ದರು. ಆಗ ಸ್ವಾಮಿ, "ಅದು ಸರಿಯೋ, ಇದು ಸರಿಯೋ ಹಾಗೆ ಮಾಡಲೋ, ಹೀಗೆ ಮಾಡಲೋ ಎಂದು ವೃಥಾ ಚಿಂತೆ ಮಾಡುತ್ತಿದ್ದೀ. ಮನಸ್ಸಿನ ಚಂಚಲತೆಗೆ ಎಡೆಕೊಡಬೇಡ. ನೀನು ಹೋಗುವ ದಾರಿ ಸರಿಯಾಗಿಯೇ ಇದೆ. ನಾನು ನೋಡಿ ಕೊಳ್ಳುತ್ತೇನೆ" ಎಂದರು. ಬಾಬಾರವರು ಹೇಳಿದಂತೆಯೇ ಎಲ್ಲವೂ ಸರಿ ಹೋಯಿತು.

1977ರ ಜನವರಿಯಲ್ಲಿ ಸಂಸ್ಥೆಯ ಚಕಲ ಚರ, ಸ್ಥಿರ ಸೊತ್ತುಗಳನ್ನು ಸ್ವಾಮಿಯ ಪದತಲಕ್ಕೆ ಅರ್ಪಿಸಿ ಶ್ರೀ ನಾರಾಯಣ ಭಟ್ಟರು ಸ್ವಾಮಿ ಪಾದ ಸೇರಿಕೊಂಡರು. ಶ್ರೀ ನಾರಾಯಣ ಭಟ್ಟರ ಆಶಯದಂತೆ ಆಗಸ್ಟ್ 14, 1978ರಂದು ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರು ಲೋಕಸೇವಾ ವೃಂದವನ್ನು ಅಧಿಕೃತವಾಗಿ ಸ್ವೀಕರಿಸುವುದೆಂದು ನಿಶ್ಚಯಿಸಲಾಯಿತು. ಆ ನಂತರ ಅಳಿಕೆ ಮತ್ತು ಮುದ್ದೇನಹಳ್ಳಿಯ ಶ್ರೀ ಸತ್ಯಸಾಯಿ ಲೋಕಸೇವಾ ಟ್ರಸ್ಟ್‌ಗೆ ಭಗವಾನರೇ ಏಕೈಕ ವಿಶ್ವಸ್ತರಾದ ಮೇಲೆ ಅಭಿವೃದ್ಧಿಯ ಶಕೆ ಆರಂಭವಾಯಿತು.

ಜನವರಿ 29, 1979 ಅಳಿಕೆಯ ನೆಲಕ್ಕೆ ಭಗವಾನ್ ಬಾಬಾರವರು ಪಾದಸ್ಪರ್ಶ ಮಾಡಿ ಪುನೀತವಾಗಿಸಿದ ಮಧುರ ದಿನ. ಗಂಗಾಧರ ಭಟ್ಟರ ಪ್ರಾರ್ಥನೆ ಈಡೇರಿದ ದಿನ. ಅಳಿಕೆಗೆ ಇದು ಭಗವಾನರ ಮೊದಲ ಭೇಟಿ. ಗಂಗಾಧರ ಭಟ್ಟರು ಪುಟ್ಟಪರ್ತಿಗೆ ಹೋದಾಗ ಬಾಬಾರವರು ವಜ್ರದ ಉಂಗುರ ಸೃಷ್ಟಿ ಮಾಡಿ ಕೊಟ್ಟರು. ಸಣ್ಣದಾದಾಗ ಊದಿ ಮಾರ್ಪಡಿಸಿದರು. "ನೀನು ಚಿನ್ನದಂತಹ ವ್ಯಕ್ತಿ, ನನ್ನ ಉಪಕರಣವಾಗಿರು, ಅದರ ಮೇಲೆ ರಾರಾಜಿಸುವುದು ನನ್ನ ಉಸಿರು, ನಿನ್ನ ಜೊತೆಗೇ ನಾನಿದ್ದೇನೆ" ಎಂದು ಆಶೀರ್ವದಿಸಿ ಕಳಿಸಿದರು.

31-01-2001ರಂದು ಸ್ವಾಮಿ ಅಳಿಕೆಗೆ ಎರಡನೇ ಬಾರಿಗೆ ಬಂದರು. ಅಳಿಕೆಯ ಶ್ರೀ ಸತ್ಯಸಾಯಿ ಜನರಲ್ ಆಸ್ಪತ್ರೆ ಯು. ಗಂಗಾಧರ ಭಟ್ಟರ ಪ್ರಾರ್ಥನೆಯ ಫಲವಾಗಿ ಬಾಬಾರವರು ನೀಡಿದರು. 2004ರ ಜನವರಿ 27 ಮತ್ತು 28ರಂದು ಪ್ರಶಾಂತಿ ನಿಲಯದಲ್ಲಿ ಶ್ರೀ ಸತ್ಯಸಾಯಿ ಲೋಕಸೇವಾ ಟ್ರಸ್ಟ್ ಅಳಿಕೆ-ಮುದ್ದೇನಹಳ್ಳಿ ಇದರ ರಜತ ಮಹೋತ್ಸವವನ್ನು ಆಯೋಜಿಸುವ ಮೂಲಕ ಸ್ವಾಮಿಯ ಕೃಪೆಗೆ ಪಾತ್ರರಾದರು.

ಗಂಗಾಧರ ಭಟ್ಟರು ಉತ್ತಮ ಬರಹಗಾರರು, ಚಿಂತನಶೀಲರು, ಸದಭಿರಿಚಿಯ ಸಾಹಿತ್ಯಾಸಕ್ತರೂ ಆಗಿದ್ದಾರೆ. ಮನೋರಂಜನೆಯೊಂದಿಗೆ ಮನಸ್ಸಿಗೆ ಸಂಸ್ಕಾರ ನೀಡುವಂತಹ ಲೇಖನಗಳು, ಕತೆ, ಕಾದಂಬರಿಗಳು, ಸೇವಾಮೃತ ಎಂಬ ತ್ರೈಮಾಸಿಕ ಪತ್ರಿಕೆ ಪ್ರಕಟವಾಗುತ್ತಿದ್ದವು. ಇದು ಅವರ ಸಾಹಿತ್ಯ ಕೃಷಿಗೆ ಭೂಮಿಕೆಯಾಯಿತು. ಪತ್ರಿಕೆಯ ಜನಪ್ರಿಯತೆ ಹೆಚ್ಚಿತು. ಪರಿಣಾಮವಾಗಿ ಮಾಸ ಪತ್ರಿಕೆಯಾಗಿ ಪರಿವರ್ತನೆಗೊಂಡಿತು. ನೂರಾರು ಪುಟಗಳಲ್ಲಿರುವ ಪುಸ್ತಕದ ಸಾರವನ್ನು ಸಂಕ್ಷಿಪ್ತವಾಗಿ ಇಳಿಸುವ ಕಲೆ ಅವರಿಗೆ ಕರಗತವಾಯಿತು. ಶ್ರೀ ಶಂಕರ ಭಗವತ್ಪಾದರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ರಮಣ ಮಹರ್ಷಿಗಳು, ಭಗವಾನ್ ಬುದ್ಧ, ಮಹಾವೀರ, ಏಸುಕ್ರಿಸ್ತ, ತಿಲಕರು, ಗೋಖಲೆ, ಲಾಲ್ ಬಹದ್ದೂರು ಶಾಸ್ತ್ರಿಗಳು, ಭಗವಾನ್ ಶ್ರೀ ಸತ್ಯಸಾಯಿ ಬಾಬಾ - ಹೀಗೆ ತಮ್ಮ ಮನಸ್ಸಿಗೆ, ತಮ್ಮ ವಿಚಾರಗಳಿಗೆ, ಧೋರಣೆಗಳಿಗೆ ಸರಿ ಹೊಂದುವ ವ್ಯಕ್ತಿ ಚಿತ್ರಗಳನ್ನು ಕಟ್ಟಿಕೊಟ್ಟಿದ್ದಾರೆ. ಮುಂದೆ ಪತ್ರಿಕೆಯ ಸಂಪಾದಕರಾಗಿ ಜನಪ್ರಿಯತೆಯನ್ನು ಬೆಳೆಸಿಕೊಂಡರು. ಆಧ್ಯಾತ್ಮಿಕ ಪತ್ರಿಕೆಯೆಂದರೆ ಲೌಕಿಕ ಮತ್ತು ಆಧ್ಯಾತ್ಮಗಳ ಸಮನ್ವಯವಿರಬೇಕಾಗುತ್ತದೆ. ಈ ವಿಚಾರದಲ್ಲಿ ಶ್ರೀಯುತರು ಪ್ರೌಢಿಮೆಯನ್ನು ಗಳಿಸಿಕೊಂಡಿದ್ದರು.

ಪ್ರಸಕ್ತ 2017ರ ನಂತರ ಅಳಿಕೆಯಿಂದ ಪ್ರಕಟಗೊಳ್ಳುವ ಸಾಯಿ ಸೇವಾಮೃತ ದ್ವೈಮಾಸಿಕ ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡು ಇಳಿವಯಸ್ಸಿನಲ್ಲೂ ಬಹಳ ಲವಲವಿಕೆಯಿಂದ ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದರು. ಭಾಷಾಂತರಕಾರರಾಗಿ ಸಾಹಿತ್ಯ ಸೇವೆಯನ್ನು ಮಾಡಿದ್ದಾರೆ. ಎಜುಕೇರ್ ಭಾಷಾಂತರ ರೂಪವಾಗಿ ಪ್ರಕಟಗೊಂಡರೆ, ವಿದ್ಯೆ ಭಗವಾನ್ ಬಾಬಾರವರ ಉಪನ್ಯಾಸ ಮಾಲಿಕೆಗಳಿಂದ ಸಂಕಲಿತಗೊಂಡ ಕೃತಿ. ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಗೊಂಡ ಪುಸ್ತಕಗಳನ್ನು ಸುಮಾರು 87ಕ್ಕೂ ಮಿಕ್ಕಿ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿರುತ್ತಾರೆ.

ಶ್ರೀ ಗಂಗಾಧರ ಭಟ್ಟರು ಭಾವ ತೀವ್ರತೆಯಿಂದ ಕೂಡಿದ ಭಾವಗೀತೆಗಳು, ಭಕ್ತಿ ಭಾವದಿಂದ ತುಂಬಿದ ಭಕ್ತಿ ಗೀತೆಗಳು, ರಾಷ್ಟ್ರಪ್ರೇಮದಿಂದ ಪುನೀತವಾದ ಕವಿತೆಗಳನ್ನು ರಚಿಸಿರುತ್ತಾರೆ. ಈಗಾಗಲೇ ಪ್ರಕಟಗೊಂಡ ಸುಮಾರು 40 ಕವನಗಳ ಶೀರ್ಷಿಕೆಗಳು ಇಂತಿವೆ – ಸ್ವಾಗತ, ನಮ್ಮ ಬಾಬಾ, ಸುಖದ ಕೋಶ, ಮುಡಿಪು, ವಿಶ್ವರೂಪ, ಬೇಡಿಕೆ, ಭಾರತ ಮಾತೆ, ನೀನೆ ಎನಗೆ ಆಸರೆ, ಬಯಕೆ, ವಿಶ್ವರೂಪಿ, ದಿವ್ಯ ಚೇತನ, ಜಗದ ಕರೆ, ದಾರಿಗ, ಬಂದಾನ, ಸಾಯಿ ಬಂದಾನ, ಕಾಮಾನೆ, ಏಕಾಕಿ, ನಡೆಸು ಎನ್ನ ಮುಂದಕೆ, ಕಾಮಧೇನು, ಆಸರೆ, ಸುಖ ಸಾಗರ, ಹೃದಯ ವೀಣೆ, ದೇವನೆಲ್ಲಿ?, ಭಗವಂತ ಧರೆಗೆ ಬಂದ, ಚಿರಂತನ, ಜಗದೊಡೆಯ, ನೀನೇ ನಾನು, ವಸಂತಾಗಮನ, ನಾಮ ಮಹಿಮೆ, ಹೊಸ ವರುಷ, ಸೊಬಗು, ಹೃದಯ ಮಂದಿರ, ಹಂಬಲ, ನಾನು ಯಾರು, ಮೆಚ್ಚದಿರಲೆಂತು, ಬಾಳ ಬುತ್ತಿ, ದಿವ್ಯ ಆಸರೆ ಇತ್ಯಾದಿ.

**ಸಾಹಿತ್ಯ ಕ್ಷೇತ್ರದ ಕೆಲವೊಂದು ಅವಕಾಶಗಳಿಗೆ ಗಂಗಾಧರ ಭಟ್ಟರು ಅರ್ಹರಾಗಿದ್ದಾರೆ.**

1. 1993ರಲ್ಲಿ ನಡೆದ ಬಂಟ್ವಾಳ ತಾಲೂಕು 3ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಾಧ್ಯಕ್ಷರು.
2. 2011ರಲ್ಲಿ ನಡೆದ ದ.ಕ. ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಾಧ್ಯಕ್ಷರು
3. ಮಂಗಳೂರು ಆಕಾಶವಾಣಿ ನಡೆಸುವ 'ಹರ್ಷ ವಾರದ ವ್ಯಕ್ತಿ' ಸಂದರ್ಶನ
4. ಚಂದನ ದೂರದರ್ಶನದ ವಿಶೇಷ ಸಂದರ್ಶನ.
5. ಸಾಯಿ ಗ್ಲೋಬಲ್ ಹಾರ್ಮನಿ ನಡೆಸಿದ ವಿಶೇಷ ಸಂದರ್ಶನ.

ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸುವುದರೊಂದಿಗೆ ಕೃಷಿಯನ್ನು ತನ್ನ ಒಲವಿನ ಕ್ಷೇತ್ರ ಎಂದು ತಿಳಿದು ಉತ್ತೇಜಿಸಿದರು. ಇವತ್ತು ಸತ್ಯಸಾಯಿ ಫಾರ್ಮ್ ಸಂಸ್ಥೆಯ ಆರ್ಥಿಕ ಮೂಲಗಳಲ್ಲಿ ಒಂದಾಗಿ ಪ್ರಮುಖ ಸ್ಥಾನವನ್ನು ಪಡೆದಿದೆ. ಕೃಷಿಗೆ ಪೂರಕವಾದ ಮತ್ತೊಂದು ಕ್ಷೇತ್ರ ಹೈನುಗಾರಿಕೆ. ಗಂಗಾಧರ ಭಟ್ಟರನ್ನು ಹೈನುಗಾರಿಕೆಗೆ ಪ್ರೋತ್ಸಾಹಿಸಿದವರು ಭಗವಾನ್ ಬಾಬಾರವರು. ಪುಟ್ಟಪರ್ತಿಯಲ್ಲಿ ಜಾನುವಾರುಗಳಿಗೆ ಗೋಕುಲಂ ಇದ್ದ ಹಾಗೆ ಅಳಿಕೆಯಲ್ಲಿ ಗೋಶಾಲೆಯನ್ನು ಆರಂಭಿಸಿದರು. ಹಾಸ್ಟೆಲುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಶುದ್ಧ ರುಚಿಯಾದ ಹಾಲು ಪೂರೈಕೆಯೊಂದಿಗೆ ಮಕ್ಕಳ ಆರೋಗ್ಯ ವೃದ್ಧಿಗೆ ಉತ್ತೇಜನ ನೀಡಿದರು.

ಇವರು ಉತ್ತಮ ವಾಗ್ಮಿಯೂ, ಸಭಿಕರನ್ನು ಆಕರ್ಷಿಸುವ ಮಾತುಗಾರಿಕೆ ಅವರಿಗೆ ಸಿದ್ಧಿಸಿದೆ. ಸೌಮ್ಯ ಸ್ವಭಾವದವರು, ದೃಢಚಿತ್ತ, ದೀಪ್ತ ಜ್ಞಾನವುಳ್ಳವರು, ಜಾತಿ, ಮತ, ವರ್ಗ, ಭೇದಕ್ಕೆ ಎಡೆ ಕೊಟ್ಟವರಲ್ಲ. ಆಂತರಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡವರು. ಸ್ತುತಿ ನಿಂದೆಗಳಿಗೆ ಹಿಗ್ಗದೆ, ಕುಗ್ಗದೆ ನಿರ್ಲಿಪ್ತವಾಗಿರುವ ಸ್ಥಿತ ಪ್ರಜ್ಞ ಮನಸ್ಸು. ಸಾಮಾನ್ಯವಾಗಿ ಅವರನ್ನು ಸಂಸ್ಥೆಯ ಅಧಿಕಾರಿಯಾಗಿ ಯಾರೂ ಕಾಣುವುದಿಲ್ಲ. ಸಖನಾಗಿ, ಬಂಧುವಾಗಿ, ಮಾರ್ಗದರ್ಶಕರಾಗಿ, ಗುರುವಾಗಿ ಕಾಣುತ್ತಾರೆ. ಅದಕ್ಕೆ ಕಾರಣ ಇಲ್ಲದಿಲ್ಲ. ಅವರ ಬಾಯಿಯಿಂದ ತಪ್ಪಿಯಾದರೂ ಒಂದು ಮಾತು ಬಂದರೆ ಅದು ಸತ್ಯವಾಗುತ್ತಿತ್ತು.

ಬಡವರನ್ನು ಕಂಡರೆ ಮನ ಕರಗುವ ಮೃದು ಹೃದಯ. ಅಳಿಕೆ ಗ್ರಾಮದಲ್ಲಿ ಯಾರೇ ಮರಣ ಹೊಂದಿದರೂ ಅವರ ದಹನ ಕಾರ್ಯಗಳಿಗೆ ಬೇಕಾದ ಕಟ್ಟಿಗೆಯನ್ನು ನೀಡುವ ವ್ಯವಸ್ಥೆಯನ್ನು ಸಂಸ್ಥೆಯ ವತಿಯಿಂದ ಮಾಡಿದ್ದಾರೆ. ಇತ್ತೀಚೆಗೆ ಆಧುನಿಕ ರೀತಿಯ ಚಿತಾ ಪೆಟ್ಟಿಗೆಯ ವ್ಯವಸ್ಥೆಯನ್ನು ಒದಗಿಸುತ್ತಿದ್ದಾರೆ.

ಹರಿಕಥೆ, ಯಕ್ಷಗಾನ ಕಲೆಯ ಬಗ್ಗೆ ಅಪಾರ ಅಭಿಮಾನವಿದ್ದು, ಯಕ್ಷಗಾನ ರಂಗದಲ್ಲಿ ಪಳಗಿದ ಅದ್ವಿತೀಯ ಕಲಾವಿದರುಗಳಾದ ಶೇಣಿ ಗೋಪಾಲ ಕೃಷ್ಣ ಭಟ್, ಕೋಳ್ಯೂರು ರಾಮಚಂದ್ರ ರಾವ್, ಕರ್ಗಲ್ಲು ಸುಬ್ಬಣ್ಣ ಭಟ್, ಕರ್ಗಲ್ಲು ವಿಶ್ವೇಶ್ವರ ಭಟ್, ಪದ್ರೆ ಕುಮಾರ, ಡಾ. ಕೋಳ್ಯೂರು ರಾಮಚಂದ್ರ ರಾವ್, ಉಬರಡ್ಕ ಉಮೇಶ ಶೆಟ್ಟಿ, ರವಿಚಂದ್ರ ಕನ್ನಡಿ ಕಟ್ಟೆ, ಗಿರೀಶ್ ರೈ ಕಕ್ಯಪದವು

ಮೊದಲಾದವರನ್ನು ವಿದ್ಯಾನಿವೇಶನಕ್ಕೆ ಕರೆಸಿ ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಪ್ರತೀ ವರ್ಷ ಹನುಮಗಿರಿ ಮೇಳದ ಆಟವನ್ನು ಆಡಿಸುತ್ತಿದ್ದರು. ತಾಳ ಮದ್ದಳೆಯನ್ನು ಆಯೋಜಿಸುತ್ತಿದ್ದರು.

ಸರಳ ಜೀವನ ಇವರ ಇನ್ನೊಂದು ಮುಖ. ಪ್ರೇಮ ಕುಟೀರವೆಂಬ ಆಶ್ರಮದಲ್ಲೇ ವಾಸ. ಒಂದು ಪಂಚೆ, ಜುಬ್ಬ, ಶಾಲು ಇತ್ಯಾದಿ ಸರಳ ವಸ್ತುಗಳು ಇವರ ನಿತ್ಯದ ತೊಡುಗೆ. ಕರ್ತವ್ಯ ನಿಷ್ಠೆ ಮತ್ತು ಸಮಯ ಪ್ರಜ್ಞೆ ಎಲ್ಲರೂ ಮೆಚ್ಚುವ ವಿಚಾರವಾಗಿದೆ. ಅವರ ಮಾತು ಹೃದಯದಿಂದ ಬರುತ್ತಿದೆಯೇ ಹೊರತು ತುಟಿಗಳಿಂದಲ್ಲ. ಹಾಗಾಗಿ ಅವರ ಮಾತುಗಳಲ್ಲಿ ಆ ಶಕ್ತಿ ಇದೆ. ಇವರನ್ನು ಕಾಣಬೇಕಾದರೆ ಪೂರ್ವಾನುಮತಿ ಬೇಕಾಗಿಲ್ಲ. ಸಂಸ್ಥೆಗೆ ಯಾರೇ ಅತಿಥಿಗಳು ಬಂದರೂ ಅವರೇ ನೇರವಾಗಿ ಅತಿಥಿಗಳ ಬಳಿಗೆ ಹೋಗಿ ಕುಶಲೋಪರಿ ವಿಚಾರಿಸುವುದು ಅವರ ಗುಣ. ಬಡ ಕೂಲಿ ಕಾರ್ಮಿಕರಾದರೂ ತಮ್ಮ ಕಷ್ಟಗಳನ್ನು, ನೋವು-ನಲಿವುಗಳನ್ನು ಅವರ ಬಳಿ ತೋಡಿಕೊಂಡರೆ ಸಾಂತ್ವನದ ಮಾತುಗಳು ಅವರ ಬಾಯಿಯಿಂದ ಬರುತ್ತಿತ್ತು.

ಹನುಮಂತನು ರಾಮತತ್ತ್ವಗಳಿಗೆ ತನ್ನನ್ನು ತಾನು ಸಮರ್ಪಿಸಿಕೊಂಡ ಹಾಗೆ ನಾರಾಯಣ ಭಟ್ಟರ ತತ್ವವೊಂದಕ್ಕೆ ತನ್ನನ್ನು ತಾನು ಸಂಪೂರ್ಣವಾಗಿ ತನ್ನ ಸರ್ವಸ್ವವನ್ನೂ ಒಪ್ಪಿಸಿಕೊಂಡು ಸಾಯಿರಾಮನಿಗೆ ಪ್ರಿಯವೆನಿಸಿದರು. ಸಾಯಿ ರಾಮನ ಚರಿತ್ರೆಯಲ್ಲಿ ಅವರಿಗೊಂದು ಸ್ಥಾನ ಇದ್ದೇ ಇದೆ.

**ಅಳಿಕೆಯಲ್ಲಿರುವ ವಿದ್ಯಾಸಂಸ್ಥೆಯ ವಿವಿಧ ವಿಭಾಗಗಳು** :

1. ಶ್ರೀ ಸತ್ಯಸಾಯಿ ಲೋಕಸೇವಾ ಹಿರಿಯ ಪ್ರಾಥಮಿಕ ಶಾಲೆ, ಅಳಿಕೆ (ಕನ್ನಡ)
2. ಶ್ರೀ ಸತ್ಯಸಾಯಿ ಲೋಕಸೇವಾ ಬಾಲಕರ ಪ್ರೌಢಶಾಲೆ, ಅಳಿಕೆ (ಆಂಗ್ಲ & ಕನ್ನಡ)
3. ಶ್ರೀ ಸತ್ಯಸಾಯಿ ಲೋಕಸೇವಾ ಬಾಲಕಿಯರ ಪ್ರೌಢಶಾಲೆ, ಅಳಿಕೆ (ಕನ್ನಡ)
4. ಶ್ರೀ ಸತ್ಯಸಾಯಿ ಲೋಕಸೇವಾ ವಿದ್ಯಾಕೇಂದ್ರ, ಅಳಿಕೆ (ಸಿ.ಬಿ.ಎಸ್.ಇ.)
5. ಶ್ರೀ ಸತ್ಯಸಾಯಿ ಲೋಕಸೇವಾ ಪದವಿ ಪೂರ್ವ ಕಾಲೇಜು, ಅಳಿಕೆ (ವಿಜ್ಞಾನ, ವಾಣಿಜ್ಯ, ಕಲಾ ವಿಭಾಗ)
6. ಶ್ರೀ ಸತ್ಯಸಾಯಿ ಬಾಯ್ಸ್ ಹಾಸ್ಟೆಲ್, ಅಳಿಕೆ
7. ಬಾಪೂಜಿ ಬಾಲನಿಕೇತನ, ಅಳಿಕೆ (ಅನಾಥಾಲಯ)
8. ಶ್ರೀ ಸತ್ಯಸಾಯಿ ಜನರಲ್ ಆಸ್ಪತ್ರೆ, ಅಳಿಕೆ
9. ಶ್ರೀ ಸತ್ಯಸಾಯಿ ವಿಕಾಸ ಟ್ರೇಡರ್ಸ್, ಅಳಿಕೆ
10. ಶ್ರೀ ಸತ್ಯಸಾಯಿ ಸನಾಥನ ಸಾರಥಿ ಕಾರ್ಯಾಲಯ, ಅಳಿಕೆ
11. ಶ್ರೀ ಸತ್ಯಸಾಯಿ ಫಾರ್ಮ್, ಅಳಿಕೆ
12. ಶ್ರೀ ಸತ್ಯಸಾಯಿ ಗೋಶಾಲೆ, ಅಳಿಕೆ
13. ಶ್ರೀ ಸತ್ಯಸಾಯಿ ಈಜು ಕೊಳ

**II. ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ** :

1. ಶ್ರೀ ಸತ್ಯಸಾಯಿ ಲೋಕಸೇವಾ ಹಿರಿಯ ಪ್ರಾಥಮಿಕ ಶಾಲೆ, ಮುದ್ದೇನಹಳ್ಳಿ (ಕನ್ನಡ)
2. ಶ್ರೀ ಸತ್ಯಸಾಯಿ ಲೋಕಸೇವಾ ಬಾಲಕರ ಪ್ರೌಢಶಾಲೆ, ಮುದ್ದೇನಹಳ್ಳಿ (ಆಂಗ್ಲ & ಕನ್ನಡ)
3. ಶ್ರೀ ಸತ್ಯಸಾಯಿ ಲೋಕಸೇವಾ ವಿದ್ಯಾಕೇಂದ್ರ, ಮುದ್ದೇನಹಳ್ಳಿ (ಸಿ.ಬಿ.ಎಸ್.ಇ.)
4. ಶ್ರೀ ಸತ್ಯಸಾಯಿ ಲೋಕಸೇವಾ ಪದವಿ ಪೂರ್ವ ಕಾಲೇಜು, ಮುದ್ದೇನಹಳ್ಳಿ
5. ಶ್ರೀ ಸತ್ಯಸಾಯಿ ಫಾರ್ಮ್, ಮುದ್ದೇನಹಳ್ಳಿ
6. ಶ್ರೀ ಸತ್ಯಸಾಯಿ ಗೋಶಾಲೆ, ಮುದ್ದೇನಹಳ್ಳಿ

- ವಿಟ್ಲ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶ.
- ಎರುಂಬು ಶ್ರೀ ಶಂಕರನಾರಾಯಣ ದೇವಸ್ಥಾನದ ಬ್ರಹ್ಮಕಲಶ

- ಮಡಿಯಾಲ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಕಲ್ಯಾಣ ಮಂಟಪದ ವಿಸ್ತರಣೆ.
- ಪ್ರತೀ ವರ್ಷ ಗಣೇಶ ಹಬ್ಬದಂದು ಹಲವು ಗಣ್ಯರನ್ನು ಆಮಂತ್ರಿಸಿ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ಸನ್ಮಾನಿಸಿ ವಿಶೇಷವಾಗಿ ಆಚರಿಸುತ್ತಿದ್ದರು.
- ಬಡವರ ಬಗ್ಗೆ ವಿಶೇಷ ಕಾಳಜಿ ವಹಿಸಿ ವೈದ್ಯಕೀಯ ಚಿಕಿತ್ಸಾ ಶಿಬಿರ, ತಪಾಸಣಾ ಶಿಬಿರಗಳನ್ನು ನಡೆಸುತ್ತಿದ್ದರು.
- 1984ನೇ ಇಸವಿಯಿಂದ 2015ನೇ ವರೆಗೆ ಕನ್ನಡ ಸನಾಥನ ಸಾರಥಿಯ ಸಂಪಾದಕರಾಗಿದ್ದರು.
- 1977 ರಿಂದ 1984ರವರೆಗೆ ಸೇವಾಮೃತ ಮಾಸ ಪತ್ರಿಕೆಯ ಸಂಪಾದಕರಾಗಿದ್ದರು. 2016 ರಿಂದ ಸಾಯಿ ಸೇವಾಮೃತದ ಸಂಪಾದಕರು.
- ಪುಟ್ಟಪರ್ತಿಯಲ್ಲಿ ಜರಗಿದ 50ನೇ ಸನಾಥನ ಸಾರಥಿಯ ಸಮ್ಮೇಳನದಲ್ಲಿ ರಾಷ್ಟ್ರೀಯ ಮಟ್ಟದ ಸನಾಥನ ಸಾರಥಿಯ ಸಲಹಾ ಮಂಡಳಿಯ ಸದಸ್ಯರಾಗಿದ್ದರು.
- ಹಿರಣ್ಯ ವೆಂಕಟೇಶ್ವರ ಭಟ್‌ರವರ ಸಂಪಾದಕತ್ವದಲ್ಲಿ ಗಂಗಾಧರ ಭಟ್ಟರ 'ಗಂಗಾಧರ ಗೌರವ' ಎಂಬ ಅಭಿನಂದನಾ ಗ್ರಂಥ ಬಿಡುಗಡೆಯಾಗಿರುತ್ತದೆ.

***************

ಶ್ರೀಯುತ ಗಂಗಾಧರ ಭಟ್ಟರು ಲೋಕಸೇವಾ ವೃಂದದ ಸ್ಥಾಪಕ ಕಾರ್ಯದರ್ಶಿಯಾಗಿ 1950ರಿಂದಲೇ ಕಾರ್ಯ ನಿರ್ವಹಿಸುತ್ತಾ ಬಂದಿದ್ದರು. ಶ್ರೀ ಮಡಿಯಾಲ ನಾರಾಯಣ ಭಟ್‌ರವರ ನಿರ್ಗಮನದ ನಂತರ ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರ ಆದೇಶದಂತೆ ಸಂಸ್ಥೆಯ ಅಧ್ಯಕ್ಷತೆಯನ್ನು ವಹಿಸಿಕೊಂಡರು. ಎಲ್ಲ ರೀತಿಯಲ್ಲೂ ಸಂಸ್ಥೆಯನ್ನು ಕಳೆದ 70 ವರ್ಷಗಳಿಂದ ಸರಿದೂಗಿಸಿಕೊಂಡು ಜನರ ಮತ್ತು ಕಾರ್ಯಕರ್ತರ ಮೆಚ್ಚುಗೆಗೆ ಪಾತ್ರರಾದರು. ಶ್ರೀ ಗಂಗಾಧರ ಭಟ್ಟರನ್ನು ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರೇ ಆಯ್ಕೆ ಮಾಡಿದರು. ಮುಂದೆ "ಗಂಗಾಧರ್ ನುಡಿದರೆ ನಾನು ನುಡಿದಂತೆ, ಅವನು ಓಡಾಡಿದರೆ ನಾನು ಓಡಾಡಿದಂತೆ" ಎಂಬುದಾಗಿ ಭಗವಾನ್ ಬಾಬಾರವರು ಶ್ರೀ ಗಂಗಾಧರ ಭಟ್ಟರನ್ನು ಕೊಂಡಾಡಿದರು. ಹೀಗಾಗಿ ಗಂಗಾಧರ ಭಟ್ ಅವರ ಮಾತನ್ನು ಅಳಿಕೆಯಲ್ಲಿ ಪ್ರತಿಯೊಬ್ಬರೂ ಯಾವುದೇ ಆಕ್ಷೇಪಣೆಗಳನ್ನು ಹೇಳದೆ ಪಾಲಿಸುತ್ತಾರೆ. ಆದ್ದರಿಂದಲೇ ಅಳಿಕೆಯ ಶಿಕ್ಷಣ ಸಂಸ್ಥೆಗಳನ್ನು ಮಾತ್ರವಲ್ಲದೆ, ಉಚಿತ ಆಸ್ಪತ್ರೆ, ಅನಾಥಾಲಯ, ಕೃಷಿ, ಪಶುಸಂಗೋಪನೆ, ಪುಸ್ತಕ ಪ್ರಕಾಶನ, ಪತ್ರಿಕಾ ಪ್ರಸಾರ, ಹಾಸ್ಟೆಲುಗಳು ಇತ್ಯಾದಿಗಳ ನಿರ್ವಹಣೆಯನ್ನು ಸಾಂಗವಾಗಿ ನಡೆಸಿಕೊಂಡು ಬಂದಿದ್ದಾರೆ.

ಒಂದು ಕುಲೀನ ಬಡ ಕುಟುಂಬದಲ್ಲಿ ಇವರ ಜನನ. ದೇಶಭಕ್ತಿ ಹಾಗೂ ತತ್ವಾಸಕ್ತಿಗಳುಳ್ಳ ಇವರು ಎಳೆಯ ಪ್ರಾಯದಲ್ಲೇ ಶ್ರೀ ನಾರಾಯಣ ಭಟ್ಟರ ಬಳಿಗೆ ಬಂದು ಅವರನ್ನು ತನ್ನ ಗುರುವೆಂದು ಒಪ್ಪಿಕೊಂಡರು. ಮಾನಧನರಾದ ಇವರು ಯಾವುದನ್ನೂ ಸುಲಭವಾಗಿ ಒಪ್ಪುತ್ತಿರಲಿಲ್ಲ. ಶ್ರೀ ಮಡಿಯಾಲ ನಾರಾಯಣ ಭಟ್ಟರನ್ನು ತನ್ನ ಗುರುಸ್ಥಾನದಲ್ಲಿ ನಿಲ್ಲಿಸುವಾಗಲೂ ಸಾಕಷ್ಟು ಚಿಂತನೆ ನಡೆಸಿದ್ದರು. ಪ್ರತಿಯೊಬ್ಬರನ್ನು ಪರೀಕ್ಷಿಸಿ, ಆ ವ್ಯಕ್ತಿಯ ಮೌಲ್ಯ ಮಾಪನ ಮಾಡಿ ಸಮರ್ಪಕವಾಗಿ ಉಪಯೋಗಿಸುವ ಜಾಣ್ಮೆಯನ್ನು ಭಗವಂತ ಅವರಿಗೆ ನೀಡಿದ್ದ ಎನ್ನುವುದರಲ್ಲಿ ಎಳ್ಳಷ್ಟು ಸಂಶಯವಿಲ್ಲ.

ಹಳ್ಳಿಗರ ಬಗ್ಗೆ ಇವರಿಗೆ ವಿಶೇಷ ಮಮತೆ. ಬಡವರು, ಅವಿದ್ಯಾವಂತರ ಕುರಿತು ಇವರ ಹೃದಯ ಬಹುಬೇಗ ಕರಗಿ ಅವರ ನೆರವಿಗೆ ಧಾವಿಸುವುದು. ಇವರು ಅಳಿಕೆ ಗ್ರಾಮಸ್ಥರ ಹೃದಯವನ್ನು ಗೆದ್ದಿದ್ದಾರೆ. ಕೆಲ ಸಮಯ ಅಳಿಕೆ ಪಂಚಾಯತ್ ಹಾಗೂ ಸಹಕಾರಿ ಸಂಘದ ನೇತೃತ್ವ

ಇವರ ಪಾಲಿಗೆ ಒಲಿದು ಬಂದಿತ್ತು. ಮಂಜೇಶ್ವರ ತಾಲೂಕಿನ ಬಾಯಾರಿನಲ್ಲಿ ಹುಟ್ಟಿದ ಇವರು ಸ್ವಭಾವತಃ ಸಂಕೋಚ ಪ್ರವೃತ್ತಿಯವರು. ತನ್ನ ಸ್ವಭಾವಕ್ಕೆ ಹೊಂದುವವರನ್ನು ಮಾತ್ರವೇ ಗೆಳೆಯರನ್ನಾಗಿ ಮಾಡಿಕೊಳ್ಳುತ್ತಿದ್ದರು. ಹಿಂದಿ ಕಲಿಯುವ ನೆಪದಲ್ಲಿ ಶ್ರೀ ಮಾದಕಟ್ಟೆ ಈಶ್ವರ ಭಟ್ಟರ ಗೆಳೆತನ ಇವರಿಗೆ ಲಭಿಸಿತು. ಇವರಿಬ್ಬರಿಗೂ ಪ್ರಿಯವಾದ ಪುಸ್ತಕವೆಂದರೆ ಸ್ವಾಮಿ ಶಿವಾನಂದರ 'ಬ್ರಹ್ಮಚರ್ಯವೇ ಜೀವನ, ವೀರ್ಯನಾಶವೇ ಮೃತ್ಯು'. ಈ ವಿಚಾರದಲ್ಲಿ ಗಹನವಾದ ಚರ್ಚೆ ನಡೆಯುತ್ತಿದ್ದ ಒಂದು ಸಂದರ್ಭ ವಿಠಲ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಮಡಿಯಾಲ ನಾರಾಯಣ ಭಟ್ಟರು ಯುವಕರಿಗೆ ಸೂಕ್ತ ಮಾರ್ಗದರ್ಶನ ಮಾಡುತ್ತಾರೆ; ಅವರಲ್ಲಿ ಹೋಗೋಣ ಎಂದು ಶ್ರೀ ಈಶ್ವರ ಭಟ್ಟರು ಒತ್ತಾಯಿಸಿದರು. ಆದರೆ ಶ್ರೀ ಗಂಗಾಧರ ಭಟ್ಟರು ಸುಲಭವಾಗಿ ಈ ಸಲಹೆಯನ್ನು ಒಪ್ಪಲಿಲ್ಲ. ಮೊದಲೇ ಶ್ರೀ ನಾರಾಯಣ ಭಟ್ಟರು ಆಗರ್ಭ ಶ್ರೀಮಂತರು. ಜೊತೆಗೆ ಮುಖ್ಯೋಪಾಧ್ಯಾಯರ ಅಧಿಕಾರದಲ್ಲಿರುವವರು. ನಮಗೇಕೆ ಈ ದೊಡ್ಡವರ ಉಸಾಬರಿ ಎಂದು ನಾನಾ ರೀತಿಯ ಸಬೂಬು ಹೇಳಿ ತಪ್ಪಿಸಲು ಯತ್ನಿಸಿದರು. ಆದರೆ ಶ್ರೀ ಈಶ್ವರ ಭಟ್ಟರು ಬಹಳ ಖಡಕ್. ಒಮ್ಮೆ ಹೋಗಿ ಭೇಟಿಯಾಗೋಣ. ನಿಮಗೆ ಅವರ ರೀತಿ ನೀತಿ ಹಿಡಿಸಿದರೆ ಮತ್ತೆ ಹೋಗೋಣ. ಇಲ್ಲವಾದಲ್ಲಿ ನಮ್ಮ ದಾರಿ ನಮಗೆ ಎಂದು ಬಲವಂತದಿಂದ ಒಪ್ಪಿಸಿದರು. ಮನಸ್ಸಿಲ್ಲದ ಮನಸ್ಸಿನಿಂದ ಗೆಳೆಯನ ಒತ್ತಾಯಕ್ಕೆ ಕಟ್ಟುಬಿದ್ದು ಹೋದರು. ಭೇಟಿಯಾದ ಕೆಲ ನಿಮಿಷದಲ್ಲೇ ಅಣ್ಣನವರು ಇವರ ಹೃದಯವನ್ನು ಗೆದ್ದರು. ಹೀಗಾಗಿ ಶ್ರೀ ಗಂಗಾಧರ ಭಟ್ ತಮ್ಮ ಮುಂದಿನ ಜೀವನವನ್ನು ಅವರೊಂದಿಗೇ ಕಳೆದರು.

ಶ್ರೀ ಗಂಗಾಧರ ಭಟ್‌ರ ಮತ್ತೊಂದು ವಿಶೇಷ ಗುಣವೆಂದರೆ ಬೇರೆಯವರು ಹೇಳುವುದನ್ನು ತಾಳ್ಮೆಯಿಂದ ಆಲಿಸುವುದು. ಅನಿವಾರ್ಯವಾಗಿ ಮಾತನಾಡಲೇಬೇಕಾದರೆ ಅಳೆದು ತೂಕ ಮಾಡಿ ನಾಲ್ಕು ಮಾತು ಹೇಳುವುದು. ಹಾಗಾಗಿ ಅವರ ಆಂತರ್ಯವನ್ನು ಅರಿಯುವುದು ಯಾರೊಬ್ಬರಿಗೂ ಸುಲಭವಾಗಿ ಸಾಧ್ಯವಿರಲಿಲ್ಲ. ಸಭೆಗಳಲ್ಲೂ ತಮ್ಮ ಅಭಿಪ್ರಾಯವನ್ನು ಗಟ್ಟಿಯಾಗಿ ಅಧಿಕಾರಯುತವಾಗಿ ಹೇಳರು. ಆದರೆ ಸಭೆಯ ನಂತರ ಯಾರಲ್ಲಿ ಹೇಳಿದರೆ ತಮ್ಮ ಅಭಿಪ್ರಾಯಕ್ಕೆ ಮನ್ನಣೆ ಬರುತ್ತದೆಯೋ ಅಂಥವರಲ್ಲಿ ಮಾತ್ರವೇ ಅವರು ಹೇಳುತ್ತಿದ್ದರು. "ನೀವು ಹೇಳುವ ವಿಷಯ ಸರಿ ಆದರೆ ಸಭೆಯಲ್ಲಿ ಏಕೆ ಹೇಳಲಿಲ್ಲ" ಎಂದು ಅಣ್ಣನವರು ಆಕ್ಷೇಪಿಸುತ್ತಿದ್ದರು. ಹೀಗಿದ್ದರೂ ಇವರ ಅಭಿಪ್ರಾಯ ತೂಕಯುಕ್ತವಾದುದರಿಂದ ಅದನ್ನು ಒಪ್ಪಿ ಇತರರನ್ನು ಒಪ್ಪಿಸುತ್ತಿದ್ದರು. ಗಟ್ಟಿಯಾದ ವಾದ ವಿವಾದವೆಂದರೆ ಇವರಿಗೆ ಇಷ್ಟವಿಲ್ಲ. ಹಾಗೆಂದ ಮಾತ್ರಕ್ಕೇ ತಮ್ಮ ಅಭಿಪ್ರಾಯವನ್ನು ಬಿಟ್ಟು ಕೊಡುವವರಲ್ಲ. ಹೇಳುವುದು ಅನಿವಾರ್ಯವೆಂದಾದಲ್ಲಿ ತಮ್ಮ ಅಧಿಕಾರ ಚಲಾಯಿಸಿ ಸ್ಪಷ್ಟವಾಗಿ ಹೇಳಿ ಹೀಗೆಯೇ ಆಗಬೇಕೆಂದು ಹೇಳುವುದು. ಅಥವಾ ಅಕಸ್ಮಾತ್ ಅದು ಬೇಡವೆಂದು ಕಂಡು ಬಂದರೆ ಬೇರೆಯವರ ಮೂಲಕ ಸರಿಯಾದ ರೀತಿ ಉತ್ತರ ಹೇಳಿಸುವುದು ಇವರಿಗೆ ಸುಲಭವಾಗಿ ಕರಗತವಾಗಿದೆ.

ಕವಿ ಹೃದಯದ ಶ್ರೀ ಗಂಗಾಧರ ಭಟ್ಟರು ಆಳವಾದ ಭಾವನೆಗಳಲ್ಲಿ ಸುಲಭವಾಗಿ ಮುಳುಗಬಲ್ಲರು. ಅವರ ಭಕ್ತಿಯನ್ನು ಅವರ ಕವಿತೆಗಳ ಮೂಲಕ, ಲೇಖನಗಳ ಮೂಲಕ ಕಾಣಬಹುದು. ಸೇವಾಮೃತದ ಉಪ ಸಂಪಾದಕರಾಗಿದ್ದ ಇವರು ಪೂಜ್ಯ ಅಣ್ಣನವರ ನಂತರ ಪ್ರಧಾನ ಸಂಪಾದಕರಾದರು.

ಮುಂದೆ 1984ರಿಂದ ಕನ್ನಡ ಸನಾತನ ಸಾರಥಿಯ ಸಂಪಾದಕರಾದರು. ಹಾಗೂ ಭಗವಾನ್ ಶ್ರೀ ಸತ್ಯಸಾಯಿಬಾಬಾರವರ ಬಗ್ಗೆ ಹತ್ತಾರು ಪುಸ್ತಕಗಳನ್ನು ಕನ್ನಡದಲ್ಲಿ ಬೆಳಕಿಗೆ ತಂದರು. ಇತರರು ಹತ್ತಾರು ವಾಕ್ಯಗಳಲ್ಲಿ ಹೇಳುವುದನ್ನು ಇವರು ಹತ್ತಾರು ಶಬ್ಧಗಳಲ್ಲಿ ಹೇಳಬಲ್ಲರು. ಮಿತಭಾಷಿಯಾದರೂ ಉಪನ್ಯಾಸಗಳಿಗೆ ನಿಂತರೆ ದಕ್ಷಿಣ ಕನ್ನಡದ ಶುದ್ಧ ಕನ್ನಡದಲ್ಲಿ ನಿರರ್ಗಳವಾಗಿ ಮಾತನಾಡಬಲ್ಲರು. ಸಾಹಿತ್ಯ, ಸಂಗೀತ, ಯಕ್ಷಗಾನ, ಹರಿಕಥೆಗಳಲ್ಲಿ ವಿಶೇಷವಾದ ಆಸಕ್ತಿ. ಯಾವುದು ರುಚಿಯೋ, ಹಿತವೋ, ಉತ್ತಮವೋ ಅದನ್ನು ಮಾತ್ರವೇ ಸ್ವೀಕರಿಸುತ್ತಾರೆ.

ಭಗವಾನ್ ಬಾಬಾರವರನ್ನು ತಮ್ಮ ಗೆಳೆಯರು ನಂಬಿ ದೇವರು ಎಂದು ಹೇಳಿದಾಗ ಅಪಹಾಸ್ಯ ಮಾಡಿದ ಇವರು ಮುಂದೆ ಪುಟಪರ್ತಿಯಲ್ಲಿ ಪ್ರಥಮ ಬಾರಿ ಅವರ ದರ್ಶನ, ಸ್ಪರ್ಶನ, ಸಂಭಾಷಣಾದಿಗಳನ್ನು ಪಡೆದು ಸ್ವಾಮಿಗೆ ಶರಣು ಬಂದರು. ಪೂಜ್ಯ ಅಣ್ಣನವರ ನಂತರ ಸ್ವಾಮಿ ಹೇಳಿದರು ಎಂಬ ಮಾತ್ರಕ್ಕೆ ಮನಸ್ಸಿಲ್ಲದ ಮನಸ್ಸಿನಿಂದ ಲೋಕಸೇವಾ ವೃಂದದ ಅಧ್ಯಕ್ಷರಾದ ಇವರು ಸ್ವಾಮಿ ತನಗೆ ವಹಿಸಿಕೊಟ್ಟಿರುವ ಕೆಲಸವನ್ನು ನಿರ್ವಂಚನೆಯಿಂದ ತನ್ನ ದೇಹದಲ್ಲಿ ಚೈತನ್ಯವಿರುವಷ್ಟು ಕಾಲ ಚೆನ್ನಾಗಿ ಮಾಡಬೇಕೆಂಬ ಹಂಬಲವುಳ್ಳವರಾಗಿದ್ದಾರೆ. ಸಂಸ್ಥೆಯನ್ನು ಮುನ್ನಡೆಸುವಲ್ಲಿ ತನ್ನ ಸ್ವಭಾವಕ್ಕೆ ಹೊಂದುವವರನ್ನು ತನ್ನ ಬಳಿ ಇರಿಸಿಕೊಂಡು ಸುಮಾರು 60 ವರ್ಷಗಳಿಂದ ಇದನ್ನು ನಡೆಸುತ್ತಾ ಅಳಿಕೆಯ ಹೆಸರು ಕರ್ನಾಟಕದಾದ್ಯಂತ ಪಸರಿಸುವಂತೆ ಸಂಪೂರ್ಣವಾಗಿ ಶ್ರಮಿಸಿದ್ದಾರೆ.

ಕೃಷಿ–ಹೈನುಗಾರಿಕೆಯಲ್ಲಿ ಆಸಕ್ತಿಯನ್ನು ಹೊಂದಿರುವ ಇವರು ಅದರಿಂದ ಆರ್ಥಿಕವಾಗಿ ಸಂಸ್ಥೆಗೆ ಲಾಭ ಪಡೆಯುವ ಬಗ್ಗೆ ಆಳವಾಗಿ ಆಲೋಚಿಸುತ್ತಾರೆ. ಕಟ್ಟಡದ ಕಾಮಗಾರಿ, ಮೇಸ್ತ್ರಿ, ಆಚಾರಿ, ತೋಟದ ಕೆಲಸದವರು ಹೀಗೆ ಎಲ್ಲರಿಂದ ಸಮರ್ಪಕವಾಗಿ ಕೆಲಸ ತೆಗೆಯುವ ವಿಧಾನದಲ್ಲಿ ಇವರು ಪಳಗಿದವರು. ಪ್ರತಿ ಕೆಲಸದಿಂದ ಸಂಸ್ಥೆಗೆ ಒಂದಲ್ಲ ಒಂದು ಲಾಭವಾಗಬೇಕು ಎಂಬುದು ಅವರ ಅಂಬೋಣ. ಸ್ನೇಹ, ವಿಶ್ವಾಸ, ಆರ್ಥಿಕ ಲಾಭ ಹೀಗೆ ಎಲ್ಲ ವಿಚಾರಗಳಲ್ಲಿಯೂ ಲೆಕ್ಕಾಚಾರ ಹಾಕುವವರು. ಭಾರತೀಯ ಸಂಸ್ಕೃತಿಯ ಗುರು–ಶಿಷ್ಯ ಪರಂಪರೆಗೆ ಒತ್ತು ನೀಡುತ್ತಾ ಎಲ್ಲಾ ವಿಭಾಗಗಳ ವಿದ್ಯಾರ್ಥಿ ಅಧ್ಯಾಪಕರಿಗೆ ಮಾರ್ಗದರ್ಶನ ಮಾಡುವ ಕಲೆ ಇವರಿಗೆ ವಿಶೇಷವಾದುದು. ವಿದ್ಯಾಸಂಸ್ಥೆಗೆ ಭೇಟಿ ನೀಡುವ ಪ್ರತಿಯೊಬ್ಬ ಅತಿಥಿ, ಹಳ್ಳಿಗರು, ಹಳೆ ವಿದ್ಯಾರ್ಥಿಗಳು ಹೀಗೆ ಎಲ್ಲರೊಡನೆ ಪ್ರೀತಿಯಿಂದ ಮಾತನಾಡುತ್ತಾ ತಾನು ಸಂಸ್ಥೆಯ ಅಧ್ಯಕ್ಷ ಎಂಬುದನ್ನು ಮರೆತು ಬಿಡುತ್ತಾರೆ. ಸಂಸ್ಥೆಯ ವಿವಿಧ ವಿಭಾಗಗಳಿಂದ ಬರುವ ಕಾರ್ಯಕರ್ತರ ಊಟ, ವಸತಿ ವ್ಯವಸ್ಥೆಗಳನ್ನು ವೈಯಕ್ತಿಕವಾಗಿ ನೋಡಿಕೊಳ್ಳುವುದಲ್ಲದೆ ಆತ್ಮೀಯವಾಗಿ ಬೆರೆತು ನಾನಾ ವಿಚಾರಗಳನ್ನು ಮಾತನಾಡುತ್ತಾರೆ. ಇವರ ಸರಳತೆ, ವಿನಯ, ಭಕ್ತಿ, ಶ್ರದ್ಧೆ ಶರಣಾಗತಿಗಳು ಎಲ್ಲರನ್ನೂ ಸಂತೋಷಗೊಳಿಸುವಂತಹದು. ಪೂಜ್ಯ ನಾರಾಯಣ ಭಟ್ಟರು ವಾಸವಾಗಿದ್ದ ಪ್ರೇಮಕುಟೀರದ ಆಶ್ರಮದ ಪುಟ್ಟದೊಂದು ಕೋಣೆಯೇ ಇವರ ವಾಸದ ಮನೆ. ವಯಸ್ಸು 90 ಆದರೂ ಮುಂಜಾನೆ ಗಂಟೆ 4–00 ರಿಂದ ರಾತ್ರಿ ಗಂಟೆ 10–00ರ ತನಕ ಕಾರ್ಯನಿರತ ಕರ್ಮಯೋಗಿ ಇವರು.

**ಪ್ರೇಮ ಕುಟೀರ (ತ್ಯಾಗಜೀವಿ ಕಾರ್ಯಕರ್ತರ ಆಶ್ರಮ) :**

ಪೂಜ್ಯ ದಿ। ಮಡಿಯಾಲ ನಾರಾಯಣ ಭಟ್ಟರ ವಾಸಸ್ಥಾನವಾಗಿದ್ದ ಪ್ರೇಮ ಕುಟೀರ ಅವರು ವಾಸಕ್ಕೆ ತೊಡಗಿದ್ದಾಗ ಮುಳಿ ಹುಲ್ಲು ಛಾವಣಿಯ ಬಿರುಕು ಬಿಟ್ಟ ಮಣ್ಣು ಗೋಡೆಗಳ ಗುಡಿಸಲಾಗಿತ್ತು. ತಾನು ಹುಟ್ಟಿದ ಮಡಿಯಾಲದ ದೊಡ್ಡ ಮಾಳಿಗೆಯ ಮನೆಯನ್ನು ಬಿಟ್ಟು ವಿದ್ಯಾಸಂಸ್ಥೆಗಳ ನಿರ್ಮಾಣಕ್ಕಾಗಿ ಸತ್ಯಸಾಯಿ ವಿಹಾರದ ಅಡಿಕೆ ತೋಟದ ಬಳಿಯ ಈ ಗುಡಿಸಲಿಗೆ ಅವರು 1963ರಲ್ಲಿ ಆಗಮಿಸಿದರು. ಅವರನ್ನು ಅಣ್ಣನೆಂದೇ ಅನುಸರಿಸಿ ಬಂದು ಅವರೊಂದಿಗೆ ಆಗ ನೆಲೆಸಿದವರು ಅವರಂತೆಯೇ ತ್ಯಾಗದ ದೀಕ್ಷೆ ಹೊಂದಿದ ಶ್ರೀ ಯು. ಗಂಗಾಧರ ಭಟ್. ತ್ಯಾಗ, ಪ್ರೇಮ ಮತ್ತು ಸೇವೆಗಳನ್ನೇ ವ್ರತವಾಗಿ ಸ್ವೀಕರಿಸಿದ ಯುವಕರಿಗೆ ಇದೊಂದು ಸಾಧನಾ ಕುಟೀರವಾಗಲಿ ಎಂಬುದು ಅಣ್ಣನವರ ಅಂಬೋಣವಾಗಿತ್ತು. ನಿತ್ಯ ಪ್ರಾರ್ಥನೆ, ಪೂಜೆ, ಸತ್ಸಂಗ, ಊಟ ಮತ್ತು ಸರಳವಾದ ವಸತಿ ವ್ಯವಸ್ಥೆಯ ಈ ಪ್ರೇಮ ಕುಟೀರ ಆಶ್ರಮ ಈಗಲೂ ಹಂಚಿನ ಛಾವಣಿಯ ಸರಳವಾದ ಹಳ್ಳಿಯ ಮನೆಯಾಗಿಯೇ ಇದೆ. ಈಗಲೂ ಸಂಸ್ಥೆಯ ಅಧ್ಯಕ್ಷರ ಮತ್ತು ತ್ಯಾಗಜೀವಿ ಕಾರ್ಯಕರ್ತರ ವಾಸಸ್ಥಾನ ಇದಾಗಿದೆ. ಸುತ್ತಲೂ ತೆಂಗು, ಕಂಗು ಮತ್ತು ಬಾಳೆಯ ತೋಟಗಳಿದ್ದು ಈ ಆಶ್ರಮ ಪ್ರಶಾಂತ ವಾತಾವರಣದಿಂದ ಕೂಡಿದೆ. ಇಲ್ಲಿ ಪ್ರತಿನಿತ್ಯ ಬೆಳಗ್ಗೆ ಓಂಕಾರ, ಸುಪ್ರಭಾತ, ಪ್ರಾರ್ಥನೆ, ಭಜನೆ, ಪೂಜೆ ಮತ್ತು ಸಂಜೆ ಭಜನೆ ನಡೆಯುತ್ತದೆ. ಸರಳವಾದ ಕಟ್ಟಡದಲ್ಲೇ ಸ್ಥಾಪಕಾಧ್ಯಕ್ಷರು ತಮ್ಮ ಗೆಳೆಯರೊಂದಿಗೆ ಒಂದು ವ್ಯವಸ್ಥಿತವಾದ ಸೇವಾ ಯಜ್ಞವನ್ನು ಆರಂಭಿಸಿದರು.

## ಗೌ। ಅಧ್ಯಕ್ಷರು ಮಂಗಳೂರು ಆಕಾಶವಾಣಿಗೆ ನೀಡಿದ ಸಂದರ್ಶನ

2. ನಿಮ್ಮ ಈ ವಿದ್ಯಾಸಂಸ್ಥೆ ಯಾವಾಗ ಆರಂಭವಾಯಿತು ?

   ಲೋಕಸೇವಾ ಪ್ರೌಢಶಾಲೆ, 1963 ಜೂನ್‌ನಲ್ಲಿ ಆರಂಭಗೊಂಡಿತು.

3. ಜೂನಿಯರ್ ಕಾಲೇಜು ಯಾವಾಗ ಆರಂಭವಾಯಿತು ?

   1967ರಲ್ಲಿ ಹೈಯರ್ ಸೆಕೆಂಡರಿಯೆಂಬುದಾಗಿ ಬದಲಾವಣೆಗೊಂಡು ಮುಂದೆ ಪ್ರತ್ಯೇಕ ಪದವಿ ಪೂರ್ವ ಕಾಲೇಜಾಗಿ ಪರಿವರ್ತನೆಗೊಂಡಿತು.

4. ಸಿ.ಬಿ.ಯಸ್.ಇ. ಶಾಲೆ ಯಾವಾಗ ಆರಂಭ ?

   1984ರಲ್ಲಿ ಸಿ.ಬಿ.ಯಸ್.ಇ. ಅಂದರೆ ಶ್ರೀ ಸತ್ಯಸಾಯಿ ಲೋಕಸೇವಾ ವಿದ್ಯಾಕೇಂದ್ರ ಪ್ರಾರಂಭಗೊಂಡಿತು.

5. ಪರೀಕ್ಷಾ ಫಲಿತಾಂಶಗಳು ಹೇಗಿವೆ?

   ಸಿ.ಬಿ.ಯಸ್.ಇ. ಪ್ರಾರಂಭವಾದಾಗಿನಿಂದ ಎಲ್ಲ ವರ್ಷಗಳಲ್ಲೂ Xನೇ ತರಗತಿಯ ಪಬ್ಲಿಕ್ ಪರೀಕ್ಷೆಗಳಲ್ಲಿ ಶೇಕಡಾ 100 ಫಲಿತಾಂಶ ಬರುತ್ತಾ ಇದೆ.

6. ವಿದ್ಯಾರ್ಥಿಗಳ ನೈತಿಕ ಹಾಗೂ ಶೈಕ್ಷಣಿಕ ಮಟ್ಟ ಹೇಗಿದೆ ?

   ಹೆಚ್ಚಿನ ಎಲ್ಲ ವಿದ್ಯಾರ್ಥಿಗಳ ನೈತಿಕ ಮತ್ತು ಶೈಕ್ಷಣಿಕ ಗುಣಮಟ್ಟ ಉತ್ತಮವಿದೆ.

7. ವಿದ್ಯಾರ್ಥಿಗಳಲ್ಲಿ ಹುದುಗಿರುವ ಪ್ರತಿಭೆಗಳನ್ನು ಹೇಗೆ ಹೊರ ತರುತ್ತೀರಿ ?

   ಅವರ ಪ್ರತಿಭೆಗಳನ್ನು ಹೊರ ಬರುವಂತೆ ಮಾಡಲು ಅನೇಕ ಚಟುವಟಿಕೆಗಳನ್ನು ಏರ್ಪಡಿಸುತ್ತೇವೆ.

8. ನಿಮ್ಮ ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸುವಲ್ಲಿ ಡೊನೇಶನ್ ಕೊಡಬೇಕಾ?

   ಭಗವಾನರು ಮನಿಮೇಕಿಂಗ್ ಎಜ್ಯುಕೇಶನ್ ನಮ್ಮದಲ್ಲ. ನಮ್ಮದು ಮ್ಯಾನ್ ಮೇಕಿಂಗ್ ಎಜ್ಯುಕೇಶನ್ ಎಂದಿದ್ದಾರೆ. ಹಾಗಾಗಿ ಯಾವುದೇ ಡೊನೇಶನ್ ಕೊಡುವ ಅಗತ್ಯವಿಲ್ಲ.

9. ಯಾವ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತೀರಿ ?

   ಸ್ಥಳೀಯ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಹಾಸ್ಟೆಲಿಗೆ ದಾಖಲಾತಿ ಬಯಸುವವರನ್ನು ಪ್ರವೇಶ ಪರೀಕ್ಷೆ ಮತ್ತು ವೈಯಕ್ತಿಕ ಭೇಟಿಯ ಮೂಲಕ ಅರ್ಹತೆಯ ಆಧಾರದಲ್ಲಿ ಆಯ್ಕೆ ಮಾಡುತ್ತೇವೆ. ಸ್ಥಳೀಯರಿಗೆ ಮುಕ್ತ ಅವಕಾಶವಿದೆ.

10. ವಿದ್ಯಾರ್ಥಿಗಳು ಆಟ ಪಾಠಗಳಲ್ಲಿ ಯಾವುದೇ ದಾಖಲೆಗಳನ್ನು ಸ್ಥಾಪಿಸುತ್ತಾರೆಯೇ ?

    ಕ್ರೀಡೆಗಳಲ್ಲಿ ಭಾಷಣ, ಪ್ರಬಂಧ, ಕ್ವಿಜ್ ಮುಂತಾದ ಸ್ಪರ್ಧೆಗಳಲ್ಲಿ ನಮ್ಮ ವಿದ್ಯಾರ್ಥಿಗಳು ತಾಲೂಕು, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಶಸ್ತಿ ಗಳಿಸುತ್ತಿದ್ದಾರೆ. ಪಾಠಗಳಲ್ಲೂ ರಾಜ್ಯ ಮಟ್ಟದಲ್ಲಿ ರ್‍ಯಾಂಕ್‌ಗಳನ್ನು ಗಳಿಸುತ್ತಿದ್ದಾರೆ.

11. ಹಾಸ್ಟೆಲಿನಲ್ಲಿ ಎಷ್ಟು ವಿದ್ಯಾರ್ಥಿಗಳು ಇದ್ದಾರೆ ?

    ನಮ್ಮದು 3 ಹಾಸ್ಟೆಲು ಮತ್ತು ಒಂದು ಅನಾಥಾಲಯದಲ್ಲಿ ಸೇರಿ ಗಂಡು ಮಕ್ಕಳು ಒಟ್ಟು 1000 ಕ್ಕಿಂತ ಹೆಚ್ಚು ಮಂದಿ ಇದ್ದಾರೆ.

12. ಅಲ್ಲಿ ಹಾಸ್ಟೆಲ್ ಹಾಗೂ ಶಾಲಾ ದಾಖಲೆಗಳಲ್ಲಿ ಯಾವುದೇ ನಿರ್ಬಂಧವಿದೆಯೇ ?

ನಮ್ಮಲ್ಲಿ ಯಾವುದೇ ಜಾತಿ, ಮತ, ಪಂಥ, ರಾಜಕೀಯ ಪಕ್ಷಗಳ ಭೇದವಿಲ್ಲದೆ ನಮ್ಮ ಸಂಸ್ಥೆಯ ಧ್ಯೇಯ ಧೋರಣೆಗಳನ್ನು ಅನುಸರಿಸುವವರಿಗೆ ಅವಕಾಶ ನೀಡುತ್ತೇವೆ.

13. ಹಾಸ್ಟೆಲ್‌ಗಳಲ್ಲಿ ಮಕ್ಕಳನ್ನು ಯಾರು ನೋಡಿಕೊಳ್ಳುತ್ತಾರೆ ?

ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿ, ಉಪನ್ಯಾಸಕರು, ವಾರ್ಡನ್ ಹೆಚ್ಚಿನವರು ಬ್ರಹ್ಮಚಾರಿಗಳಾಗಿದ್ದು ಹಾಸ್ಟೆಲಿನಲ್ಲೇ ವಾಸವಾಗಿದ್ದಾರೆ. ಅವರೂ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುತ್ತಾರೆ. ಮಕ್ಕಳ ಅಧ್ಯಯನದ ಮೇಲ್ವಿಚಾರಣೆಗಾಗಿಯೇ ಹಾಸ್ಟೆಲಿನಲ್ಲಿ ಅಧ್ಯಾಪಕರುಗಳಿದ್ದಾರೆ.

14. ಮಕ್ಕಳ ದಿನಚರಿ ಹೇಗಿದೆ ?

ಬೆಳಗ್ಗೆ 5.00 ಗಂಟೆಗೆ ಎದ್ದು 5.30ಗೆ ಸಾಮೂಹಿಕ ಪ್ರಾರ್ಥನೆ, ಯೋಗ, ಅಧ್ಯಯನ ಇತ್ಯಾದಿಗಳೊಂದಿಗೆ ಸಂಜೆ ಆಟೋಟ, ಸ್ನಾನ, ಪ್ರಾರ್ಥನೆ, ಅಧ್ಯಯನ, ಊಟೋಪಚಾರ ಮುಗಿಸಿ ರಾತ್ರಿ 10.00 ಕ್ಕೆ ಎಲ್ಲರೂ ವಿಶ್ರಾಂತಿ ಹೊಂದುತ್ತಾರೆ.

15. ಮಕ್ಕಳು ಖಾಯಿಲೆ ಬಿದ್ದಾಗ ಏನು ಮಾಡುತ್ತೀರಿ ?

ನಮ್ಮಲ್ಲೇ ಶ್ರೀ ಸತ್ಯಸಾಯಿ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತೇವೆ. ಹೆಚ್ಚಿನ ಚಿಕಿತ್ಸೆ ಬೇಕಾದಾಗ ಹೆತ್ತವರಿಗೆ ತಿಳಿಸಿ ಸೂಕ್ತ ಏರ್ಪಾಡು ಮಾಡಲಾಗುತ್ತಿದೆ.

16. ಮಕ್ಕಳು ಸ್ವಂತ ಟಿ.ವಿ., ಮೊಬೈಲು, ರೇಡಿಯೋ ಇಟ್ಟು ಕೊಳ್ಳಬಹುದೇ ?

ಹಾಸ್ಟೆಲಿನಲ್ಲಿ ಇವುಗಳಿಗೆ ಅವಕಾಶವಿಲ್ಲ. ಯೋಗ್ಯವಾದವುಗಳನ್ನು ಟಿ.ವಿ.ಗಳಲ್ಲಿ ಪ್ರದರ್ಶಿಸಲಾಗುತ್ತಿದೆ. ದೂರವಾಣಿ ಸೌಲಭ್ಯ ಸಂಸ್ಥೆಯಲ್ಲೇ ಇದೆ.

17. ಮಕ್ಕಳ ದೈಹಿಕ ಮಾನಸಿಕ ಬೆಳವಣಿಗೆಗೆ ಏನು ವ್ಯವಸ್ಥೆಗಳಿವೆ ?

ದೈಹಿಕ ಬೆಳವಣಿಗೆಗೆ ಪೌಷ್ಟಿಕ ಆಹಾರ, ಯೋಗ, ವ್ಯಾಯಾಮ, ಕ್ರೀಡೆಗಳಿವೆ. ಮಾನಸಿಕ ಬೆಳವಣಿಗೆಗೆ ಚಿಂತನಾ ಗೋಷ್ಠಿಗಳು, ಪತ್ರಿಕೆ, ವಾಚನಾಲಯಗಳ ವ್ಯವಸ್ಥೆ ಇದೆ.

18. ಮಕ್ಕಳಲ್ಲಿ ರಾಷ್ಟ್ರೀಯ ಭಾವನೆಯನ್ನು ಪ್ರಚೋದಿಸಲು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸುತ್ತೀರಾ ?

ಹೌದು. ರಾಷ್ಟ್ರೀಯ ದಿನಾಚರಣೆಗಳು, ರಾಷ್ಟ್ರಭಕ್ತರ ಜೀವನಾದರ್ಶಗಳು, ಭಾರತೀಯ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುತ್ತೇವೆ.

19. ಅಧ್ಯಯನದಲ್ಲಿ ಹಿಂದುಳಿದವರನ್ನು ಏನು ಮಾಡುತ್ತೀರಿ ?

ಆಯಾ ವಿಷಯಗಳಿಗೆ ಸಂಬಂಧಪಟ್ಟ ಅಧ್ಯಾಪಕರು ಹಿಂದುಳಿದ ವಿದ್ಯಾರ್ಥಿಗಳಿಗೆ ಶಾಲಾ ಅವಧಿಯ ಬಳಿಕ ಮಾರ್ಗದರ್ಶನ ನೀಡುತ್ತಾರೆ. ಹೆತ್ತವರನ್ನು ಕರೆಸಿಕೊಂಡು ಅವರಿಂದಲೂ ಮಕ್ಕಳಿಗೆ ಪ್ರೋತ್ಸಾಹ ಸಿಗುವಂತೆ ಮಾಡುತ್ತೇವೆ.

20. ವಿದ್ಯಾರ್ಥಿಗಳ ಮನರಂಜನೆಗಾಗಿ ಯಾವ ವ್ಯವಸ್ಥೆ ಇದೆ ?

ಬೇರೆ ಬೇರೆ ವಿಭಾಗದ ವಿದ್ಯಾರ್ಥಿಗಳಿಂದ ವಾರಕ್ಕೊಮ್ಮೆ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ. ಉತ್ತಮ ಕಥೆಗಳ ಟಿ.ವಿ. ಪ್ರದರ್ಶಿಸುತ್ತೇವೆ (ವೀಡಿಯೋ). ಯಕ್ಷಗಾನ, ನೃತ್ಯ, ಸಂಗೀತ, ಮಿಮಿಕ್ರಿ, ಕೋಲಾಟ ಮುಂತಾದ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತೇವೆ.

21. ಮಕ್ಕಳು ರಾಜ್ಯ, ರಾಷ್ಟ್ರ ಮಟ್ಟಗಳಲ್ಲಿ ದಾಖಲೆ ಸ್ಥಾಪಿಸಿದ್ದಾರೆಯೇ ?

ಹೌದು. ಸಿ.ಇ.ಟಿ.ಯಲ್ಲಿ ಕೆಲವಾರು ವರ್ಷಗಳಿಂದ ರ್‍ಯಾಂಕುಗಳು ಬರುತ್ತಾ ಇವೆ. ಭಾಷಣ, ಪ್ರಬಂಧ, ಕ್ರೀಡೆ, ಚೆಸ್ ಇತ್ಯಾದಿಗಳಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಪ್ರಶಸ್ತಿಗಳು ಬಂದಿವೆ.

22. ನಿಮ್ಮ ಸಂಸ್ಥೆಗೆ ಹೆಚ್ಚಿನ ಪ್ರಸಿದ್ಧಿ ಯಾಕಿದೆ ?

ನಮ್ಮ ವಿದ್ಯಾರ್ಥಿಗಳಿಂದಲೇ ಸಂಸ್ಥೆಯ ಬಗ್ಗೆ ಜನರ ಆದರಾಭಿಮಾನ ಬೆಳೆದಿದೆಯೆನ್ನಬಹುದು. ಶಿಕ್ಷಣದ ಗುಣಮಟ್ಟದೊಂದಿಗೆ ವಿದ್ಯಾರ್ಥಿಗಳ ನೈತಿಕ ಗುಣಮಟ್ಟವೂ ಪ್ರಸಿದ್ಧಿಗೆ ಕಾರಣವಿರಬೇಕು.

23. ನೀವು ಜಾಹಿರಾತುಗಳನ್ನು ಸಂಸ್ಥೆಯ ಪ್ರಸಿದ್ಧಿಗಾಗಿ ಕೊಡುತ್ತೀರಾ ?

ನಮ್ಮದೇ ಸಂಸ್ಥೆಯ ಮಾಸ ಪತ್ರಿಕೆ ಸನಾತನ ಸಾರಥಿಯಲ್ಲಿ ಅವಶ್ಯಕ ಮಾಹಿತಿಗಳನ್ನು ಮಾತ್ರ ನೀಡುತ್ತೇವೆ. ಬೇರೆ ಯಾವುದೇ ಪ್ರಚಾರ ಮಾಧ್ಯಮಗಳನ್ನು ಉಪಯೋಗಿಸುವುದಿಲ್ಲ.

24. ನಿಮ್ಮ ಸಂಸ್ಥೆಯನ್ನು ನಡೆಸುವವರು ಯಾರು ?

ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರು ಇದರ ಏಕೈಕ ವಿಶ್ವಸ್ಥರು. (Sole Trustee). ಅವರ ಆದೇಶದಂತೆ ಸಂಸ್ಥೆಯ ಚೇಯರ್‌ಮೆನ್ ಶ್ರೀ ಯು. ಗಂಗಾಧರ ಭಟ್ ಮತ್ತು ಇತರ ಟ್ರಸ್ಟ್ ಮೆಂಬರ್‌ಗಳು ಕೆಲಸಗಳನ್ನು ನಡೆಸುತ್ತಾರೆ.

25. ನಿಮ್ಮ ಸಂಸ್ಥೆಯ ಕಾರ್ಯ ಕಲಾಪಗಳೇನು?

ಜ್ಞಾನ ಪ್ರಸಾರಕ್ಕಾಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು. ಗ್ರಂಥಗಳನ್ನು ಪ್ರಕಟಿಸುವುದು, ಮಾಸ ಪತ್ರಿಕೆ ನಡೆಸುವುದು, ಚಿಂತನಾ ಗೋಷ್ಠಿಗಳನ್ನು ಏರ್ಪಡಿಸುವುದು. ಬಡತನ ನಿವಾರಣೆಗಾಗಿ ಉದ್ಯೋಗಗಳನ್ನು ಕಲ್ಪಿಸುವುದು. ಅನಾಥ ಬಾಲಕರನ್ನು ವಿದ್ಯಾವಂತರನ್ನಾಗಿ ಮಾಡುವುದು. ಆರೋಗ್ಯ ಸುಧಾರಣೆಗಾಗಿ ಆಸ್ಪತ್ರೆ ನಡೆಸುವುದು. ಮೆಡಿಕಲ್ ಕ್ಯಾಂಪ್ ನಡೆಸುವುದು ಇತ್ಯಾದಿ.

26. ನಿಮ್ಮಲ್ಲಿ ಶ್ರೀಮಂತರ ಮಕ್ಕಳಿಗೆ ಮಾತ್ರ ಅವಕಾಶ ಎನ್ನುತ್ತಾರೆ. ಸರಿಯೇ

ನಮ್ಮಲ್ಲಿ ಡೊನೇಶನ್ ಕೊಟ್ಟು ಸೇರುವ ಅವಕಾಶವಿಲ್ಲದ್ದರಿಂದ ಶ್ರೀಮಂತರ ಮಕ್ಕಳಿಗೇ ಇಲ್ಲಿ ಅವಕಾಶ ಎಂಬ ಮಾತೇ ಬರುವುದಿಲ್ಲ. ಇಲ್ಲಿನ ಹಾಸ್ಟೆಲಿನ ಫೀಸ್ ಕೂಡಾ ಮಧ್ಯಮ ವರ್ಗದ ಜನರ ಸಾಮರ್ಥ್ಯಕ್ಕೆ ಅನುಗುಣವಾಗಿದೆ. ಸ್ಥಳೀಯರಾದ ಎಲ್ಲಾ ವಿದ್ಯಾರ್ಥಿಗಳಿಗೂ ಇಲ್ಲಿ ಕಲಿಯುವ ಅವಕಾಶವಿದೆ. ಬಡ ಕೂಲಿ ಕಾರ್ಮಿಕರ ಮಕ್ಕಳೂ ಇಲ್ಲಿ ಬಹು ಮಂದಿ ಕಲಿಯುತ್ತಿದ್ದಾರೆ.

27. ಮಕ್ಕಳಿಗೆ ಯಾವ ಯಾವ ವ್ಯವಸ್ಥೆಗಳಿವೆ ?

ಯೋಗ್ಯ ಪಾಠೋಪಕರಣ, ಪೀಠೋಪಕರಣ, ಲೈಬ್ರರಿ ಮತ್ತು ಬಹಳ ವಿಸ್ತಾರವಾದ ಕ್ರೀಡಾಂಗಣಗಳಿವೆ. ಈಜು ಕೊಳ, ಬಾಸ್ಕೆಟ್‌ಬಾಲ್, ಟೇಬಲ್ ಟೆನ್ನಿಸ್‌ಗಳು ಇವೆ. ನೃತ್ಯ, ಸಂಗೀತ ಇತ್ಯಾದಿ ಕಲೆಗಳಿಗೆ ಅವಕಾಶವಿದೆ.

28. ನಿಮ್ಮಲ್ಲಿ ಬಡ ಅನಾಥ ಮಕ್ಕಳಿಗೆ ವ್ಯವಸ್ಥೆವಿದೆಯೇ ?

ಹೌದು. 1969ರ ಗಾಂಧೀ ಜನ್ಮ ಶತಾಬ್ಧಿಯ ವೇಳೆ ಬಾಪೂಜಿ ಬಾಲನಿಕೇತನವೆಂಬ ಅನಾಥಾಶ್ರಮ ಪ್ರಾರಂಭಿಸಲ್ಪಟ್ಟು ಅದರಲ್ಲಿ ಸುಮಾರು ವರ್ಷದಲ್ಲಿ 50 ಬಾಲಕರಿಗೆ ಕಲಿಯುವ ಅವಕಾಶ ಕಲ್ಪಿಸಲಾಗಿದೆ. ಇಲ್ಲಿಂದ ಕಲಿತು ಹೋದ ಅನೇಕ ವಿದ್ಯಾರ್ಥಿಗಳು ಮುಂದಿನ ಜೀವನದಲ್ಲಿ ಉತ್ತಮ ಸ್ಥಾನಮಾನ ಸಂಪನ್ನರಾಗಿ ಬಾಳುತ್ತಿದ್ದಾರೆ.

29. ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ನೈತಿಕತೆಗೆ ಪ್ರಾಧಾನ್ಯತೆ ಕಡಿಮೆ ಕೊಡಲಾಗುತ್ತಿದೆ ಎನ್ನುವ ಅಭಿಪ್ರಾಯವಿದೆ. ನಿಮ್ಮ ಶಿಕ್ಷಣ ಸಂಸ್ಥೆಯಲ್ಲಿ ಈ ಬಗ್ಗೆ ಯಾವ ವ್ಯವಸ್ಥೆಯಿದೆ ?

ಆಧುನಿಕ ಶಿಕ್ಷಣ ಮಾಹಿತಿ ಆಧಾರಿತವೂ ಪರೀಕ್ಷಾ ಕೇಂದ್ರಿತವೂ ಆಗಿದೆ. ಇದು ಮೌಲ್ಯಾಧಾರಿತವಾಗಬೇಕು. ವ್ಯಕ್ತಿತ್ವ ನಿರ್ಮಾಣದ್ದಾಗಬೇಕು. ಮಾನವೀಯ ಮೌಲ್ಯಗಳೆಲ್ಲ ಕುಸಿದಿವೆಯೆಂದು ಎಲ್ಲರೂ ವೇದಿಕೆಯ ಮೇಲೆ ಹೇಳುತ್ತಾರೆ. ಆದರೆ ಶಾಲಾ ಪಠ್ಯಕ್ರಮದಲ್ಲಿ ಮೌಲ್ಯಕ್ಕೆ ಯಾವುದೇ ಮಹತ್ವ ಕೊಟ್ಟಿಲ್ಲ. ನಾವು ವಾರದಲ್ಲಿ ಒಂದು ಅವಧಿ ಮೌಲ್ಯಶಿಕ್ಷಣ ಬೋಧಿಸಿ, ಅದರಲ್ಲಿ ಪರೀಕ್ಷೆಯನ್ನು ಏರ್ಪಡಿಸಿ, ಮಕ್ಕಳಲ್ಲಿ ಮೌಲ್ಯವರ್ಧನೆಗೆ ಬೇಕಾದ ಪ್ರೋತ್ಸಾಹ ಕೊಡುತ್ತೇವೆ. ಗುರುಕುಲ ಮಾದರಿಯ ಶಿಕ್ಷಣ ನಮ್ಮದು. ಹಿರಿಯರ ಆದರ್ಶಗಳು ಮಕ್ಕಳಿಗೆ ದೈನಂದಿನ ಜೀವನದಲ್ಲೇ ಸಿಗುವುದರಿಂದ ಇದು ಇಲ್ಲಿ ಸುಲಭವಾಗಿದೆ. ಸಾಮೂಹಿಕ ಜೀವನದಲ್ಲೇ ಐಕ್ಯತೆ, ಸೌಹಾರ್ದತೆ, ಸೇವೆ, ಗೌರವ, ಸಹಕಾರ, ಪ್ರೀತಿ, ಕ್ಷಮೆ, ತ್ಯಾಗ, ತಾಳ್ಮೆ ಮುಂತಾದ ಎಷ್ಟೋ ಗುಣ ಮೌಲ್ಯಗಳು ವಿದ್ಯಾರ್ಥಿಗಳಿಗೆ ಇಲ್ಲಿ ಮೈಗೂಡುತ್ತೇವೆ. ಆಗಾಗ ಶ್ರಮದಾನ ಶಿಬಿರಗಳನ್ನೂ ಏರ್ಪಡಿಸುತ್ತೇವೆ.

30. ಭಜನೆ, ಪ್ರಾರ್ಥನೆ ಇತ್ಯಾದಿ ಕಾರ್ಯಕ್ರಮಗಳು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ತೊಡಕಾಗುವುದಿಲ್ಲವೇ?

ಬರೇ ಓದುವುದು, ಬರೆಯುವುದರಿಂದ ಮನೋ ಬುದ್ಧಿಗಳು ಒರಟಾಗಿ ಬೆಳೆಯುತ್ತವೆ. ಯಾಂತ್ರಿಕತೆ ಎದ್ದು ಕಾಣುತ್ತದೆ. ಆಗ ಭಜನೆ, ಪ್ರಾರ್ಥನೆಗಳಿದ್ದರೆ ಮನೋಭಾವನೆಗಳು ಉತ್ತಮವಾಗಿ ರೂಪುಗೊಳ್ಳುತ್ತವೆ. ದಣಿವು, ಒತ್ತಡ ದೂರವಾಗಿ ಚೈತನ್ಯ ಉಕ್ಕಿ ಹರಿಯುತ್ತದೆ. ಹಾಗಾಗಿ ಇವು ತೊಡಕಾಗುವುದಿಲ್ಲ. ತುಂಬಾ ಸಹಾಯಕವಾಗುತ್ತದೆ.

31. ತಮ್ಮ ಸಂಸ್ಥೆಯ ವತಿಯಿಂದ ಶಾಲಾ ಪತ್ರಿಕೆಯಿದೆಯೇ ?

ವಿದ್ಯಾರ್ಥಿಗಳ ಪ್ರತಿಭಾ ವಿಕಸನಕ್ಕಾಗಿ ಸತ್ಯಜ್ಯೋತಿ ಎಂಬ ವಾರ್ಷಿಕ ಪತ್ರಿಕೆ ಪ್ರಕಟವಾಗುತ್ತದೆ. ಪ್ರತೀ ತಿಂಗಳು ಸನಾತನ ಸಾರಥಿ ಎಂಬ ಮಾಸ ಪತ್ರಿಕೆ ನಮ್ಮ ಸಂಸ್ಥೆಯಿಂದ ಪ್ರಕಟಣೆಗೊಳ್ಳುತ್ತಾ ಇದೆ.

1. ಸ್ಫೂರ್ತಿ ಕಿರಣ
2. ತಪೋವನ
3. ಅಧ್ಯಾಪಕ

32. ನಿಮ್ಮಲ್ಲಿ ಯಾವೆಲ್ಲ ಶೈಕ್ಷಣಿಕ ವಿಭಾಗಗಳಿವೆ ?

I. ಅಳಿಕೆಯಲ್ಲಿರುವ ವಿದ್ಯಾಸಂಸ್ಥೆಯ ವಿವಿಧ ವಿಭಾಗಗಳು

1. ಶ್ರೀ ಸತ್ಯಸಾಯಿ ಲೋಕಸೇವಾ ಹಿರಿಯ ಪ್ರಾಥಮಿಕ ಶಾಲೆ, ಅಳಿಕೆ (ಕನ್ನಡ)
2. ಶ್ರೀ ಸತ್ಯಸಾಯಿ ಲೋಕಸೇವಾ ಬಾಲಕರ ಪ್ರೌಢಶಾಲೆ, ಅಳಿಕೆ (ಆಂಗ್ಲ & ಕನ್ನಡ)
3. ಶ್ರೀ ಸತ್ಯಸಾಯಿ ಲೋಕಸೇವಾ ಬಾಲಕಿಯರ ಪ್ರೌಢಶಾಲೆ, ಅಳಿಕೆ (ಕನ್ನಡ)
4. ಶ್ರೀ ಸತ್ಯಸಾಯಿ ಲೋಕಸೇವಾ ವಿದ್ಯಾಕೇಂದ್ರ, ಅಳಿಕೆ (ಸಿ.ಬಿ.ಎಸ್.ಇ.)
5. ಶ್ರೀ ಸತ್ಯಸಾಯಿ ಲೋಕಸೇವಾ ಪದವಿ ಪೂರ್ವ ಕಾಲೇಜು, ಅಳಿಕೆ (ವಿಜ್ಞಾನ, ವಾಣಿಜ್ಯ, ಕಲಾ ವಿಭಾಗ)

II. ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ :

6. ಶ್ರೀ ಸತ್ಯಸಾಯಿ ಲೋಕಸೇವಾ ಹಿರಿಯ ಪ್ರಾಥಮಿಕ ಶಾಲೆ, ಮುದ್ದೇನಹಳ್ಳಿ (ಕನ್ನಡ)
7. ಶ್ರೀ ಸತ್ಯಸಾಯಿ ಲೋಕಸೇವಾ ಬಾಲಕರ ಪ್ರೌಢಶಾಲೆ, ಅಳಿಕೆ (ಆಂಗ್ಲ & ಕನ್ನಡ)
8. ಶ್ರೀ ಸತ್ಯಸಾಯಿ ಲೋಕಸೇವಾ ವಿದ್ಯಾಕೇಂದ್ರ, ಅಳಿಕೆ (ಸಿ.ಬಿ.ಎಸ್.ಇ.)
9. ಶ್ರೀ ಸತ್ಯಸಾಯಿ ಲೋಕಸೇವಾ ಪದವಿ ಪೂರ್ವ ಕಾಲೇಜು, ಅಳಿಕೆ

33. ಮಕ್ಕಳಲ್ಲಿ ಗ್ರಾಮಾಭಿವೃದ್ಧಿಯ ಅಭಿರುಚಿಯನ್ನು ಹೇಗೆ ಮೂಡಿಸುತ್ತೀರಿ ?

ಶಾಲೆಯ ಆರಂಭಕ್ಕೆ ಮೊದಲಿನಿಂದಲೇ ನಮ್ಮ ಸಂಸ್ಥೆ ಗ್ರಾಮಕ್ಕೆ ರಸ್ತೆ, ಇತರ ಶಾಲೆಗಳಿಗೆ ಆಟದ ಮೈದಾನ ರಚನೆಯ ಶ್ರಮ ಸೇವಾ ಶಿಬಿರಗಳನ್ನು ಹಮ್ಮಿಕೊಳ್ಳುತ್ತಿತ್ತು. ವಿದ್ಯಾಸಂಸ್ಥೆಗಳ ಆರಂಭದಿಂದಲೇ ಇಲ್ಲಿನ ಗುಡ್ಡ ಪ್ರದೇಶಗಳನ್ನು ಸಮತಟ್ಟುಗೊಳಿಸುವ ಕಾರ್ಯ ವಿದ್ಯಾರ್ಥಿಗಳೂ ಅಧ್ಯಾಪಕರೂ ಊರವರೂ ಸೇರಿ ಶ್ರಮದಾನದಿಂದ ಮಾಡಿದ್ದರು. ಹಲವಾರು ಲಕ್ಷ ವೆಚ್ಚದ ಕೆಲಸಗಳು ನಡೆದಿವೆ. ಊರಿಗೆ ರಸ್ತೆಗಳನ್ನೂ, ಕಾಲ್ದಾರಿಗಳನ್ನೂ ಶ್ರಮದಾನದ ಮೂಲಕ ನಡೆಸಿದ್ದೇವೆ. ಈಗ ಗ್ರಾಮ ಸಾಕಷ್ಟು ಸೌಕರ್ಯಗಳನ್ನು ಹೊಂದಿದೆ. ವೈದ್ಯಕೀಯ ಶಿಬಿರಗಳನ್ನು ವಿದ್ಯಾರ್ಥಿಗಳ ಸಹಭಾಗಿತ್ವದಿಂದಲೇ ನಡೆಸುತ್ತೇವೆ. ಎನ್.ಎಸ್.ಎಸ್. ಘಟಕವೂ ನಮ್ಮಲ್ಲಿದೆ.

34. ಮಕ್ಕಳಲ್ಲಿ ಮಾತಾಡುವ ಕಲೆಯನ್ನು ಯಾವ ರೀತಿ ಹೆಚ್ಚಿಸುತ್ತೀರಿ ?

ಹಾಸ್ಟೆಲುಗಳಲ್ಲಿ ಪ್ರತಿದಿನ ಸಂಜೆ ಪ್ರಾರ್ಥನಾ ಸಭೆಗಳಲ್ಲಿ ಇಬ್ಬರು ಮೂವರು ವಿದ್ಯಾರ್ಥಿಗಳಿಗೆ ಭಾಷಣಕ್ಕೆ ಅವಕಾಶ ನೀಡುತ್ತೇವೆ. ಇತರ ಶಾಲಾ ವಿದ್ಯಾರ್ಥಿಗಳಿಗೂ ಅನೇಕ ಸಂದರ್ಭಗಳಲ್ಲಿ ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ ನೀಡಿ ಪ್ರೋತ್ಸಾಹಿಸುವುದಲ್ಲದೆ ಅಂತರ್ಶಾಲಾ ಸ್ಪರ್ಧಾಕೂಟಗಳಲ್ಲೂ ಮಕ್ಕಳು ಭಾಗವಹಿಸುವುದಕ್ಕೆ ಪ್ರೋತ್ಸಾಹ ಕೊಡುತ್ತೇವೆ. ತಾಲೂಕು, ಜಿಲ್ಲೆ, ರಾಜ್ಯ ಮಟ್ಟದಲ್ಲಿ ಕೆಲವೊಮ್ಮೆ ರಾಷ್ಟ್ರ ಮಟ್ಟದಲ್ಲೂ ನಮ್ಮ ವಿದ್ಯಾರ್ಥಿಗಳು ಪ್ರಶಸ್ತಿ ಪಡೆಯುತ್ತಾರೆ.

35. ಬೇರೆ ಬೇರೆ ಪ್ರತಿಭಾವಂತ ವ್ಯಕ್ತಿಗಳನ್ನು ಕರೆಸಿ ಮಾರ್ಗದರ್ಶನ ಮಾಡುತ್ತೀರಾ ?

ಹೌದು. ಮಾನವೀಯ ಮೌಲ್ಯಗಳ ಬಗ್ಗೆ ವಿಜ್ಞಾನ, ಗಣಿತ ಇತ್ಯಾದಿ ವಿಷಯ ತಜ್ಞರನ್ನು ಕರೆಸಿ ಮಕ್ಕಳಿಗೆ ಮಾರ್ಗದರ್ಶನ ಕೊಡಿಸುತ್ತೇವೆ.

36. ನಿಮ್ಮ ಹಳೆ ವಿದ್ಯಾರ್ಥಿಗಳು ಯಾವುದೇ ಕ್ಷೇತ್ರದಲ್ಲಿ ದಾಖಲೆ ಕೆಲಸಗಳನ್ನು ಮಾಡಿದ್ದಾರಾ ?

ನಮ್ಮ ಹಳೆ ವಿದ್ಯಾರ್ಥಿಗಳು ಬಹು ಮಂದಿ ದೇಶ ಮತ್ತು ವಿದೇಶಗಳಲ್ಲಿ ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ.

ಆಡಳಿತ ಸೇವೆ : ವೆಂಕಟೇಶ್ವರ ಭಟ್, ನವೀನ್ ಭಟ್, ಡಾ। ಪ್ರಶಾಂತ್, ಟಿ. ಮಡಿಯಾಲ್, ಸಂತೋಷ್ ಬಾಬು, ಐಪಿಎಸ್. ಡಾ। ವಿನೀತ್, ಐ.ಪಿ.ಎಸ್., ಪೃಥ್ವಿಕ್ ಶಂಕರ್, ಐ.ಪಿ.ಎಸ್.

37. ಹಳೆ ವಿದ್ಯಾರ್ಥಿಗಳು ಸಂಸ್ಥೆಯೊಂದಿಗೆ ನಿಕಟ ಸಂಪರ್ಕಗಳನ್ನು ಇಟ್ಟು ಕೊಂಡಿದ್ದಾರಾ ?

ಕೆಲವು ಮಂದಿ ಹಳೆ ವಿದ್ಯಾರ್ಥಿಗಳು ಸಂಸ್ಥೆಯಲ್ಲೇ ಅಧ್ಯಾಪಕರಾಗಿದ್ದಾರೆ. ಕೆಲವು ಮಂದಿ ಬಹಳ ನಿಕಟ ಸಂಬಂಧವಿಟ್ಟುಕೊಂಡು ಸಂಸ್ಥೆಯ ಅಭಿವೃದ್ಧಿಗೆ ಸಹಕರಿಸುತ್ತಾರೆ. ವೈದ್ಯಕೀಯ ಶಿಬಿರಗಳನ್ನು ನಮ್ಮ ಹಳೇ ವಿದ್ಯಾರ್ಥಿ ಡಾಕ್ಟರ್‌ಗಳೇ ಸಂಘಟಿಸಿ ನಡೆಸುತ್ತಿದ್ದಾರೆ. ವರ್ಷಕ್ಕೊಮ್ಮೆ ದಶಂಬರ 2ನೇ ಭಾನುವಾರ ಹಳೆ ವಿದ್ಯಾರ್ಥಿಗಳು ಒಟ್ಟುಗೂಡಿ ಸಭೆ ನಡೆಸುತ್ತಾರೆ.

38. ಸಂಸ್ಥೆಯ ಅಧ್ಯಕ್ಷರು ಮುಂತಾದವರು ಬ್ರಹ್ಮಚಾರಿಗಳಾಗಿ ಯಾಕೆ ಇದ್ದಾರೆ ?

ಸಂಸ್ಥೆಯ ಸ್ಥಾಪಕಾಧ್ಯಕ್ಷರಾಗಿದ್ದ ಪೂಜ್ಯ ಮಡಿಯಾಲ ನಾರಾಯಣ ಭಟ್ಟರು ಭಾರತೀಯ ಸಂಸ್ಕೃತಿ, ಧರ್ಮಗಳ ರಕ್ಷಣೆಗೆ ಸಂಸಾರ ತಾಪತ್ರಯಗಳಿಲ್ಲದ ಬ್ರಹ್ಮಚಾರಿಗಳ ಒಂದು ವಿರಾಟ್ ಮಿಶನರಿ ಸಂಸ್ಥೆ ಕಟ್ಟಬೇಕೆಂಬ ಕನಸು ಕಂಡರು. ಆ ಬಗ್ಗೆ ಗ್ರಂಥವನ್ನೂ ಬರೆದರು. ವಿದ್ಯಾವಂತ ಯುವಕರನ್ನು ಈ ಬಗ್ಗೆ ಅವರು ಸತ್ಸಂಗ ಕೂಟಗಳನ್ನು ನಡೆಸಿ ವೈಯಕ್ತಿಕ ಸಂದರ್ಶನಕ್ಕೆ ಕರೆದು ಪ್ರೇರೇಪಿಸಿ ಪ್ರೋತ್ಸಾಹಿಸುತ್ತಿದ್ದರು. ಕಾವಿ ಧರಿಸಿದ ಸನ್ಯಾಸಿಗಳು ಸಮಾಜದೊಳಗೆ ಎಲ್ಲರೊಂದಿಗೆ ಬೆರೆತು ಸೇವೆ ಸಲ್ಲಿಸಲಿಕ್ಕಾಗುವುದಿಲ್ಲ. ಗೃಹಸ್ಥರಾದವರಿಗೆ ತಮ್ಮದೇ ಸಮಸ್ಯೆಗಳಿರುತ್ತವೆ. ಕ್ರಿಶ್ಚಿಯನ್ ಮಿಶನರಿಗಳು ಸ್ತ್ರೀ ಪುರುಷ ಭೇದವಿಲ್ಲದೆ ಲಕ್ಷಾಂತರ ಮಂದಿ ಸೇವೆಯ ದೀಕ್ಷೆ ತೊಟ್ಟು ದುಡಿಯುತ್ತಿರುವುದನ್ನು ಕಂಡು ಅದರಿಂದ ಅವರು ಪ್ರಭಾವಿತರಾಗಿ ಹಿಂದೂ ಮಿಶನರಿ ಸಂಸ್ಥೆಯಾಗಬೇಕೆಂದು ಹಂಬಲಿಸಿದರು. ಅದರ ಫಲವಾಗಿ ಅವರ ಸಂಪರ್ಕಕ್ಕೆ ಬಂದ 50ಕ್ಕಿಂತಲೂ ಹೆಚ್ಚು ವಿದ್ಯಾವಂತ ಯುವಕರು ಸಂಸ್ಥೆಯಲ್ಲಿ ಸೇವಾ ಕಾರ್ಯಗಳಿಗಾಗಿ ಬ್ರಹ್ಮಚರ್ಯದ ದೀಕ್ಷೆ ತೊಟ್ಟಿರುತ್ತಾರೆ. ಇದು ಯಾವುದೇ ಒತ್ತಾಯದಿಂದಲ್ಲ. ಸ್ವಯಂ ಸ್ಫೂರ್ತಿಯೇ ಕಾರಣ. ಅಪೇಕ್ಷೆಯುಳ್ಳವರಿಗೆ ಸೇರಲು ಅವಕಾಶವಿದೆ.

39. ನಿಮ್ಮ ಸಂಸ್ಥೆಯಲ್ಲಿ ಬ್ರಹ್ಮಚಾರಿಗಳು ಮಾತ್ರವೇ ಇದ್ದಾರಾ? ಅಥವಾ ಸಂಸಾರಿಗಳು ಇದ್ದಾರಾ?

ಬ್ರಹ್ಮಚಾರಿಗಳೂ ಇದ್ದಾರೆ. ಸಂಸಾರಿಗಳೂ ಇದ್ದಾರೆ. ಇಲ್ಲಿರುವವರೆಲ್ಲ ಬ್ರಹ್ಮಚಾರಿಗಳಾಗಿರಬೇಕೆಂಬ ನಿರ್ಬಂಧವೇನೂ ಇಲ್ಲ. ಬ್ರಹ್ಮಚಾರಿಗಳೆಲ್ಲ ಸನ್ಯಾಸಿಗಳಾಗಬೇಕೆಂಬ ನಿಯಮವೂ ಇಲ್ಲ. ಸಮಾಜ ಸೇವೆಗೆ ಸಮರ್ಪಣಾ ಭಾವದಿಂದ ಕರ್ತವ್ಯಗಳನ್ನು ನಿರ್ವಹಿಸಬೇಕೆಂಬುದು ಮುಖ್ಯ ಉದ್ದೇಶ. ಆಡಳಿತ ಮಂಡಳಿಯ ಟ್ರಸ್ಟಿನ ಸದಸ್ಯರುಗಳು ಬ್ರಹ್ಮಚಾರಿಗಳೇ. ಸ್ವಾಮಿ ಕೂಡಾ ಬ್ರಹ್ಮಚಾರಿಯೇ. ಸಂಸ್ಥೆಯಲ್ಲಿ ಅಂದಾಜು 60 ಮಂದಿ ಬ್ರಹ್ಮಚಾರಿಗಳಿದ್ದರೆ ಅದಕ್ಕೆ ದುಪ್ಪಟ್ಟು ಸಂಸಾರಿಗಳಾಗಿರುವವರು.

40. ಸತ್ಯಸಾಯಿ ಬಾಬಾರವರಿಗೂ ನಿಮಗೂ ಸಂಬಂಧವೇನು ? ಇಷ್ಟು ದೂರದ ಸಂಸ್ಥೆಯನ್ನು ಅವರು ಯಾಕೆ ತೆಗೆದುಕೊಂಡರು ? ಇದರಿಂದ ಅವರಿಗೆ ಲಾಭವಿದೆಯೇ?

1960ರಲ್ಲಿ ಲೋಕಸೇವಾ ವೃಂದವನ್ನು ಸ್ಥಾಪಿಸಿದ ಪೂಜ್ಯ ಮಡಿಯಾಲ ನಾರಾಯಣ ಭಟ್ಟರಿಗೆ 1962ರಲ್ಲಿ ಸ್ವಾಮಿಯ ಸಂದರ್ಶನ ಲಭಿಸಿತು. ಆನಂತರ ಈ ಸಂಸ್ಥೆಯ ಆರಾಧ್ಯ ದೇವರೆ ಶ್ರೀ ಸತ್ಯಸಾಯಿ ಬಾಬಾರವರಾದರು. ನಾರಾಯಣ ಭಟ್ಟರು, ಅವರ ತಾಯಿ, ತಂಗಿ ಮತ್ತು ಸಂಸ್ಥೆಯ ಪದಾಧಿಕಾರಿಗಳೆಲ್ಲರೂ ಸ್ವಾಮಿಯ ಭಕ್ತರಾದರು. ಸೇವಾಕ್ಷೇತ್ರಕ್ಕೆ

ಸತ್ಯಸಾಯಿ ವಿಹಾರ ಎಂದು ಹೆಸರಿಡಲಾಯಿತು. ಪುಟ್ಟಪರ್ತಿಯಲ್ಲಿ ಕಟ್ಟಡ ನಿರ್ಮಾಣಗಳಿಗೆ ಸ್ವಯಂ ಸೇವಕರ ತಂಡ ಹಲವಾರು ಬಾರಿ ಅಲ್ಲಿ ಹೋಗಿ 10–15 ದಿವಸ ಮೊಕ್ಕಾಂ ಹೂಡಿ ಶ್ರಮಸೇವೆ ಸಲ್ಲಿಸಿತು. ನಾರಾಯಣ ಭಟ್ಟರು ಸತ್ಯಸಾಯಿ ಸಂಸ್ಥೆಗಳ ಜಿಲ್ಲಾಧ್ಯಕ್ಷರಾಗಿಯೂ ನೇಮಕಗೊಂಡರು. ಸೇವಾಮೃತ ಎಂಬ ಮಾಸಪತ್ರಿಕೆಯಲ್ಲಿ ಸ್ವಾಮಿಯ ವಿಚಾರವೇ ತುಂಬ ತೊಡಗಿತು. 1976ರ ತನಕ ನಾರಾಯಣ ಭಟ್ಟರು ಸ್ವಾಮಿಯ ಮಾರ್ಗದರ್ಶನದಲ್ಲೇ ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳೆಸಿ 1977 ಜನವರಿ 5ರಂದು ಸಂಸ್ಥೆಯನ್ನು ಸ್ವಾಮಿಗೆ ಸಮರ್ಪಿಸಿ, ಜನವರಿ 8ರಂದು ಇಹಲೋಕದಿಂದ ನಿರ್ಗಮಿಸಿದರು. ಆಮೇಲೆ ಸ್ವಾಮಿ ಸಂಸ್ಥೆಯನ್ನು ಸ್ವೀಕರಿಸಿದರು. ಭಕ್ತ ರಕ್ಷಣೆಗಾಗಿ ಸ್ವಾಮಿ ಇದನ್ನು ಸ್ವೀಕರಿಸಿದರು.

41. ಅವರು ಸಂಸ್ಥೆಯ ಏಳಿಗೆಗಾಗಿ ಏನು ಮಾಡುತ್ತಾರೆ?

ಸ್ಥಾಪಕಾಧ್ಯಕ್ಷರಾದ ಪೂಜ್ಯ ಮಡಿಯಾಲ ನಾರಾಯಣ ಭಟ್ಟರು ನಿರ್ಗಮಿಸಿದಾಗ ಸುಮಾರು 10 ಲಕ್ಷಗಳ ಸಾಲವಿತ್ತು. ಅದನ್ನು ಸ್ವಾಮಿಯೇ ಸಂದಾಯ ಮಾಡಿದರು. ಸ್ವಾಮಿ ಸಂಸ್ಥೆಯನ್ನು ಸ್ವೀಕರಿಸಿದ ಬಳಿಕ ಮಕ್ಕಳು ಸ್ಕೂಲ್ ಫೀಸನ್ನೂ ಕೊಡಬೇಕಾಗಿಲ್ಲ. ಇದರಿಂದಲಾಗಿ ಮೌಲ್ಯಾಧಾರಿತ ಶಿಕ್ಷಣ ನೀಡಲು ಸಾಧ್ಯವಾಯಿತು.

42. ಸಂಸ್ಥೆಗೆ ಬೇಕಿದ್ದ ಆರ್ಥಿಕ ಸಂಪನ್ಮೂಲಗಳನ್ನು ಹೇಗೆ ಕ್ರೋಢೀಕರಿಸುತ್ತೀರಿ?

ಹಿಂದೆ ಉತ್ಪತ್ತಿ ಬರುತ್ತಿದ್ದ ಕೃಷಿ ಭೂಮಿಯಲ್ಲಿ ಬಹುಭಾಗವನ್ನು ಸ್ವಾಮಿಯ ಆದೇಶದಂತೆ ವಿಕ್ರಯಿಸಿ ಆ ಹಣವನ್ನು ಹೊಸ ಕಟ್ಟಡಗಳ ನಿರ್ಮಾಣಕ್ಕೆ ಬಳಸಿದೆವು. ಈಗ ಕೃಷಿ ಭೂಮಿ ಸ್ವಲ್ಪ ಇದೆ. ಆದರೆ ಅದರ ಉತ್ಪತ್ತಿ ಬಹುಭಾಗ ಅದರ ನಿರ್ವಹಣೆಗೇ ವ್ಯಯವಾಗುತ್ತದೆ. ಸ್ವಲ್ಪ ಉಳಿಕೆ ಆದಾಯ ಸಂಸ್ಥೆಗೆ ಸಿಗಬಹುದು. ಮುಖ್ಯವಾಗಿ ಮಾನವ ಸಂಪನ್ಮೂಲವೇ ಇದಕ್ಕೆ ಬೆನ್ನೆಲುಬು. ಬ್ರಹ್ಮಚಾರಿಗಳಾದವರಿಗೆ ಸರಕಾರದ ಸಂಬಳವಿದ್ದಾಗ ತಮ್ಮ ಉಳಿತಾಯದ ಹಣವನ್ನು ಸಂಸ್ಥೆಗೇ ನೀಡುತ್ತಿದ್ದರು. ಈಗ ಹಲವಾರು ಮಂದಿ ನಿವೃತ್ತರಾಗಿದ್ದಾರೆ. ಅನೇಕ ಮಂದಿ ವೇತನವಿಲ್ಲದೆ ಸೇವೆ ಸಲ್ಲಿಸುತ್ತಿದ್ದಾರೆ. ಉದಾರಿಗಳ ಸ್ವಯಂಸ್ಫೂರ್ತಿಯ ದೇಣಿಗೆಯಿಂದ ಸೇವಾಕಾರ್ಯಗಳು ನಡೆಯುತ್ತಿವೆ.

43. ನಿಮ್ಮ ಸಂಸ್ಥೆಯ ನಿಜವಾದ ಧ್ಯೇಯವೇನು?

ಆತ್ಮನೋ ಮೋಕ್ಷಾರ್ಥಂ ಜಗದ್ಧಿಚಾಯಚ ಎಂಬ ವೇದೋಕ್ತಿಯಂತೆ ಪ್ರತಿಯೊಬ್ಬರೂ ಆತ್ಮ ಕಲ್ಯಾಣದೊಂದಿಗೆ ಲೋಕ ಕಲ್ಯಾಣದಲ್ಲಿ ಜೀವನ ಸಾರ್ಥಕ ಪಡಿಸಿಕೊಳ್ಳಬೇಕು – ಇದೇ ಧ್ಯೇಯ. ಆತ್ಮಕಲ್ಯಾಣದಲ್ಲಿ ಪ್ರಾರ್ಥನೆ, ಭಜನೆ, ಧ್ಯಾನ, ಯೋಗ, ಸತ್ಸಂಗ, ಸೇವೆ ಮುಖ್ಯವಾಗುತ್ತವೆ. ಲೋಕ ಕಲ್ಯಾಣದಲ್ಲಿ ಶಿಕ್ಷಣ, ವೈದ್ಯಕೀಯ, ಅನಾಥಾಶ್ರಮ ಇತ್ಯಾದಿ ಬರುತ್ತವೆ.

44. ನಿಮ್ಮಲ್ಲಿ ಮಕ್ಕಳಿಗೆ ಯಾವ ರೀತಿಯ ಆಹಾರ ಕೊಡುತ್ತೀರಿ?

ಶುದ್ಧ ಸಸ್ಯಾಹಾರ ಕೊಡುತ್ತೇವೆ, ಮೊಟ್ಟೆ, ಮೀನು, ಮಾಂಸ ಹಾಗೂ ಮಾದಕ ಪಾನೀಯಗಳಿಗೆ ಇಲ್ಲಿ ಅವಕಾಶವಿಲ್ಲ. ಪೌಷ್ಠಿಕವಾದ ಆಹಾರ (ಎರಡು ಹೊತ್ತು ಊಟ, ಎರಡು ಹೊತ್ತು ಉಪಾಹಾರ, ರಾತ್ರಿ ಹಾಲು, (ಅನ್ನ, ಸಾರು, ಸಾಂಬಾರು, ಪಲ್ಯ) ಬೆಳಗ್ಗೆ ಮೊಳಕೆ ಬರಿಸಿದ ಕಾಳು, ವಾರದಲ್ಲಿ ಎರಡು ಬಾರಿ ಸಿಹಿ ತಿಂಡಿ ಕೊಡುತ್ತೇವೆ. ರಾತ್ರಿ ಒಂದೊಂದು ಚಪಾತಿ, ವಾರದಲ್ಲೆರಡು ಬಾರಿ ಸ್ವೀಟ್, ಪ್ರತಿ ರಾತ್ರಿ ಒಂದು ಲೋಟ ಹಾಲು.

45. ಸಂಸ್ಥೆಯ ಶೈಕ್ಷಣಿಕ ಬೆಳವಣಿಗೆಗಾಗಿ ಬೇರೆ ವಿಭಾಗಗಳನ್ನು ತೆರೆಯುತ್ತೀರಾ?

ಸದ್ಯ ನಮ್ಮ ಶಕ್ತಿ ಸಾಮರ್ಥ್ಯಕ್ಕೆ ಈಗ ಇದ್ದದ್ದೇ ಹೆಚ್ಚು.

ಭಗವಾನ್ ಬಾಬಾರವರ ಕುರಿತಾದ ಗೌ। ಯು. ಗಂಗಾಧರ ಭಟ್ ರಚಿಸಿರುವ ಪದ್ಯಗಳು

**ಮನದ ಹಂಬಲ**

(ರಾಗ : ಮೋಹನ)

ನೀನು ಬಳಿಗೆ ಬಂದು ನಿಲಲು
ಭವ್ಯಭಾವ ಬಂಧುರ
ಮೂಡಿ ಬರುವ ಹೃದಯದಲ್ಲಿ
ಪೂರ್ಣ ಶರದ ಚಂದಿರ ॥ನೀನು॥

ನಿನ್ನ ನೋಟ ಕಾದ ಮನಕೆ
ತಂಪು ಸುಧೆಯ ಸಿಂಚನ
ನಿನ್ನ ಮಧುರ ಮಾತಿನಿಂದ
ನೊಂದ ಮನಕೆ ಸಾಂತ್ವನ
ನೀನು ಸನ್ನೆ ಮಾಡೆ ಸಾಕು
ಮಾಯೆ ದೂರ ಸರಿವಳು
ನೀನು ಅಭಯ ಹಸ್ತತೋರೆ
ವೇದ ಮಾತೆ ಒಲಿವಳು ॥ನೀನು॥

ನಿನ್ನ ಪಾದ ಸ್ಪರ್ಶದಿಂದ ಭವದ ಪಾಪ ಕಳೆವುದು
ನಿನ್ನ ಸ್ಮರಣೆ ಮಾತ್ರದಿಂದ
ಜ್ಞಾನ ದೀಪ ಉರಿವುದು
ನೀನು ಮೈಯ ತಡವಿದಾಗ
ಸುಖದ ಹೊನಲು ಹರಿವುದು
ತ್ಯಾಗ ಭಕ್ತಿ ಪ್ರೇಮದಿಂದ
ಹೃದಯ ತುಂಬಿ ಬರುವುದು ॥ನೀನು॥

ಹಗಲು ಇರುಳು ಬಿಡದೆ ಇರಲಿ
ಮನದಿ ನಿನ್ನ ಚಿಂತನ
ಅಂತರಂಗದಾಳದಲ್ಲಿ
ನಡೆದು ಹೃದಯ ಮಂಥನ
ತ್ಯಾಗ ಯೋಗ ಪ್ರೇಮ ಮೂರ್ತಿ
ಭವ್ಯ ದಿವ್ಯ ಚೇತನ
ನಿನ್ನ ರಂಗಲೀಲೆಯಲ್ಲಿ
ಎಮ್ಮ ಜನ್ಮ ಪಾವನ ॥ನೀನು॥

ರಚನೆ : ಯು. ಗಂಗಾಧರ ಭಟ್
ಅಧ್ಯಕ್ಷರು
ಶ್ರೀ ಸತ್ಯಸಾಯಿ ಲೋಕಸೇವಾ ಟ್ರಸ್ಟ್, ಅಳಿಕೆ

**ಸಾಯಿ ಬಂದಾನ**

(ರಾಗ : ಮಧ್ಯಮಾವತಿ)

ಬಂದಾನ ಸಾಯಿ ಬಂದಾನ
ನಿಂದಾನ ಸಾಯಿ ನಿಂದಾನ

ಕೆಂಪಿನ ನಿಲುವಂಗಿ ಗುಂಗುರು ಕೂದಲು
ಅಭಯ ಹಸ್ತವ ತೋರಿ ಬಂದಾನ
ಮೆಲ್ಲಗೆ ನಡೆಯುತ್ತ ಮೆತ್ತಗೆ ನುಡಿಯುತ್ತ
ಸನಿಹದಿ ತಾ ಬಂದು ನಿಂದಾನ ॥ಬಂದಾನ॥

ಸುತ್ತಮುತ್ತಲು ನೋಡಿ ಚಿತ್ತಸೂರೆಯ ಮಾಡಿ
ನವಿಲಂತೆ ಮನವನ್ನು ಕುಣಿಸ್ಯಾನ
ಮಕ್ಕಳ ತಕ್ಕೈಸಿ ಮುದುಕರ ಓಲೈಸಿ
ಯುವಕರ ಬಳಿಯಲ್ಲಿ ನಿಂದಾನ ॥ಬಂದಾನ॥

ಕಾರುಣ್ಯ ರಸಧಾರೆ ವಾತ್ಸಲ್ಯವನು ತೋರೆ
ಓರೆ ನೋಟದಿ ನೋಡುತಿರುವಾನ
ಜನುಮ ಜನುಮದ ಪಾಪ
ಮನದ ಮೂಲೆಯ ತಾಪ
ಎಲ್ಲವ ತಾ ದೂರ ಸರಿಸ್ಯಾನ ॥ಬಂದಾನ॥

ಪರ್ತಿಯ ದೊರೆಯಾಗಿ ಆರ್ತರೆಡೆಗೆ ಸಾಗಿ
ಪ್ರೇಮದ ಉಣಿಸನ್ನೆ ಉಣಿಸ್ಯಾನ
ಸತ್ಯದ ನೆಲೆಯಾಗಿ ಧರ್ಮದ ತವರಾಗಿ
ಶಾಂತಿಯ ಸುಧೆಯಾಗಿ ಸರಿದಾನ
ಶಿವಶಕ್ತಿ ಒಂದಾಗಿ, ಭವದ ಬಂಧನ ನೀಗಿ
ಲೋಕಕ್ಕೆ ಬೆಳಕಾಗಿ ನಿಂದಾನ ॥ಬಂದಾನ॥

ರಚನೆ : ಯು. ಗಂಗಾಧರ ಭಟ್

## ಸ್ವಾಗತ ಗೀತೆ

(ರಾಗ : ಮೋಹನ)

ಸ್ವಾಗತಂ ಸುಸ್ವಾಗತಂ ಶ್ರೀ ಸತ್ಯಸಾಯಿ ಸ್ವಾಗತಂ
ಪರ್ತಿ ನಿವಾಸ ಪ್ರಶಾಂತಿ ನಿಲಯ ಪ್ರೇಮ ಪ್ರದಾತ ಸ್ವಾಗತಂ ॥ಸ್ವಾಗತಂ॥

ವಿದ್ಯಾದಾತಾ ಬುದ್ಧಿಪ್ರದಾತ ಪ್ರಣವಾಕಾರ ಸ್ವಾಗತಂ
ವಿಶ್ವಾಧಾರಾ ವಿಶ್ವ ನಿಯಾಮಕ ಜ್ಯೋತಿ ಸ್ವರೂಪ ಸ್ವಾಗತಂ
ಕೈಲಾಸಪತೇ ಭವತಾಪಹರೇ ಶಿವಮಂಗಲಕರ ಸ್ವಾಗತಂ
ವೈಕುಂಠ ಪತೇ ಆನಂದ ನಿಧೇ ತವಶುಭ ಚರಣೇ ಸ್ವಾಗತಂ ॥ಸ್ವಾಗತಂ॥

ನರಹರಿ ರೂಪಾ ಮುನಿಜನ ವಂದ್ಯ ಲೋಕಾಧ್ಯಕ್ಷ ಸ್ವಾಗತಂ
ಧರ್ಮಸ್ವರೂಪ ಕರುಣಾ ಪೂರ್ಣ ರಘುಕುಲ ತಿಲಕ ಸ್ವಾಗತಂ
ಮಧುರಾನಾಥಾ ಮೋಕ್ಷಪ್ರದಾತಾ ಮೋಹನ ರೂಪಾ ಸ್ವಾಗತಂ
ಶಿರಡೀನಾಥ ಫಲಪ್ರದಾತಾ ಜ್ಞಾನಸ್ವರೂಪ ಸ್ವಾಗತಂ ॥ಸ್ವಾಗತಂ॥

ಸದ್ಗುಣ ಭರಿತಾ ಸಜ್ಜನ ವಿನುತಾ ಶಾಂತಿ ಪ್ರದಾತಾ ಸ್ವಾಗತಂ
ತ್ರಿಗುಣಾತೀತ ಬಂಧನರಹಿತಾ ಬಹುವಿಧ ರೂಪಾ ಸ್ವಾಗತಂ
ಶಿವಶಕ್ತಿಮಯ ಪ್ರಶಾಂತ ಹೃದಯ ಕರುಣಾಸಿಂಧು ಸ್ವಾಗತಂ
ಪರ್ತೀನಾಥ ಯುಗವತಾರ ಜಯಜಯ ಬಾಬಾ ಸ್ವಾಗತಂ ॥ಸ್ವಾಗತಂ॥

ರಚನೆ : ಯು. ಗಂಗಾಧರ ಭಟ್

ರಚನೆ : ಶ್ರೀ ಯು. ಗಂಗಾಧರ ಭಟ್

ನೀನು ಬಳಿಗೆ ಬಂದು ನಿಲಲು
ಭವ್ಯಭಾವ ಬಂಧುರ
ಮೂಡಿ ಬರುವ ಹೃದಯದಲ್ಲಿ
ಪೂರ್ಣ ಶರದ ಚಂದಿರ ॥ ನೀನು ॥

ನಿನ್ನ ನೋಟ ಕಾದ ಮನಕೆ
ತಂಪು ಸುಧೆಯ ಸಿಂಚನ
ನಿನ್ನ ಮಧುರ ಮಾತಿನಿಂದ
ನೊಂದ ಮನಕೆ ಸಾಂತ್ವನ
ನೀನು ಸನ್ನೆ ಮಾಡೆ ಸಾಕು
ಮಾಯೆ ದೂರ ಸರಿವಳು
ನೀನು ಅಭಯ ಹಸ್ತ ತೋರೆ
ವೇದ ಮಾತೆ ಒಲಿವಳು ॥ನೀನು॥

ನಿನ್ನ ಪಾದ ಸ್ಪರ್ಶದಿಂದ
ಭವದ ಪಾಪ ಕಳೆವುದು
ನಿನ್ನ ಸ್ಮರಣೆ ಮಾತ್ರದಿಂದ
ಜ್ಞಾನ ದೀಪ ಉರಿವುದು
ನೀನು ಮೈಯ ತಡವಿದಾಗ
ಸುಖದ ಹೊನಲು ಹರಿವುದು
ತ್ಯಾಗ ಭಕ್ತಿ ಪ್ರೇಮದಿಂದ
ಹೃದಯ ತುಂಬಿ ಬರುವುದು ॥ನೀನು॥

ಹಗಲು ಇರುಳು ಬಿಡದೆ ಇರಲಿ
ಮನದಿ ನಿನ್ನ ಚಿಂತನ
ಅಂತರಂಗದಾಳದಲ್ಲಿ
ನಡೆದು ಹೃದಯ ಮಂಥನ
ತ್ಯಾಗ ಯೋಗ ಪ್ರೇಮ ಮೂರ್ತಿ
ಭವ್ಯದಿವ್ಯ ಚೇತನ
ನಿನ್ನ ರಂಗಲೀಲೆಯಲ್ಲಿ
ಎಮ್ಮ ಜನ್ಮ ಪಾವನ ॥ನೀನು॥

ನಿನ್ನ ಅಭಯ ಮುದ್ರೆಯಡಿಯೆ ಜಗದ ಚಲನೆ ನಡೆವುದು
ರವಿಯ ಚಕ್ರ ಭುವಿಯ ಚಕ್ರ ನಿತ್ಯ ಸುತ್ತುತಿರುವುದು
ಸೂರ್ಯ ಚಂದ್ರರೆಂದು ತಾವು ತಮ್ಮ ಹಿರಿಮೆ ಪೇಳರು
ಜಗದ ಏಳ್ಗೆಗಾಗಿ ತಮ್ಮ ಕಾಯ ಸವೆಸುತಿರುವರು
ವಾಯುದೇವ ಮೌನವಾಗಿ ತನ್ನ ಪಥದಿ ಕ್ರಮಿಸುವ
ಜೀವಜಾತಿ ಬದುಕಲೆಂದು ತನ್ನ ಇರವ ಮರೆಯುವ
ವರುಣದೇವ ಮೇಘವಾಗಿ ಆಗಸದಲಿ ಚಲಿಸುವ
ತಂಪು ಸುಧೆಯನೆರೆದು ಭುವಿಯ ದಾಹವನ್ನು ತಣಿಸುವ
ಅಗ್ನಿದೇವ ಹಸವೆಯಿತ್ತು ಜೀವಿಗಳನು ಕಾಯುವ
ಜೀವಶಕ್ತಿ ಉಳಿಯುವಂತೆ ಎಲ್ಲರನ್ನು ಸಲಹುವ
ಭೂಮಿತಾಯಿ ಅನ್ನವಿತ್ತು ಅಕ್ಕರೆಯೊಳು ಪೊರೆವಳು
ಭೇದವಿರದೆ ಬಂದೆರೀತಿ ಎಲ್ಲರನ್ನು ಕಾಂಬಳು
ಹಗಲು ರಾತ್ರಿ ಮಾಸವೆಂದು ಋಣತುಳುರುತಿರುವುದು
ಹಳಕಿನಿಂದ ರೋಸಿ ಹೋದ ಜನಕೆ ರೋಷ ದೊರೆವುದು
ನಿನ್ನ ಕರುಣೆಯಿಂದ ಬಹುದು ನಿತ್ಯ ದಿವ್ಯ ಭವ್ಯ ಜೀವನ
ಹೊಸತು ವರ್ಷ ಹೊಸತು ಹರ್ಷ ನಿತ್ಯ ನವ್ಯ ಚೇತನ

- ಯು. ಗಂಗಾಧರ ಭಟ್